
ಕಲ್ಯಾಣ ಕಿರಣ

ನವೆಂಬರ್-2010 ಬೆಲೆ-10.00 /-



ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮಿಗಳಿಂದ ಅಲ್ಲಮಪ್ರಭು ಶೂನ್ಯ ಪೀಠಾರೋಹಣ(ದಿ.22-10-2010





ಶರಣ ಶೈಲದ ಮೇಲೆ ಕಾನನದ ಮಧ್ಯೆ ಅಕ್ಕಮಹಾದೇವಿ



ದಿ.21-10-2010, 770 ಶರಣರಿಂದ ಸಾಮೂಹಿಕ ಇಷ್ಟಲಿಂಗಾರ್ಚನೆ



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಸಂಪುಟ-40 ಬಸವ ಶಕೆ -877 ಆಜೀವ ಸದಸ್ಯತ್ವ 1000 ರೂ.

ಸಂಚಿಕೆ-11 ನವೆಂಬರ್-2010 ವಾರ್ಷಿಕ ಚಂದಾ 100/- ರೂ.

ಚನ್ನಬಸವೇಶ - ಮಂಟಪದ ಮಾಣಿಕ್ಯ

ಶ್ರೀ ಚನ್ನ ಬಸವೇಶ ಭಕ್ತರನು ಪೊರೆವೀಶ
ಜಯ ಭಜಕ ಜನ ಬಂಧು ಕಾರುಣ್ಯ ಸಿಂಧು ॥ ಪ ॥

ಪರಮ ಗುರು ಬಸವನ ಕರಕಮಲ ಜನಿತನೆ
ಶರಣ ಹೃತ್ಸರಸಿಯ ಶ್ರೀ ಪರಮಹಂಸೆಯೆ ॥ ಅ.ಪ ॥

ಕಾರ್ತೀಕ ಪ್ರತಿಪದೆಯ ದೀವಳಿಗೆಯಂದು
ಮಾತೆಯ ಗರ್ಭದಿಂ ನೀ ಬಂದೆಯಂದು।
ಅವ್ವ ನಾಗಾಂಬಿಕೆಯ ಅಕ್ಕರೆಯ ಚಿಣ್ಣನೆ
ಅಯ್ಯ ಶಿವದೇವನ ಮಮತೆಯ ತನುಜನೆ ॥ 1 ॥

ಷಟಸ್ಥಲದ ಚೌಕಟ್ಟ ವಚನ ಶಾಸ್ತ್ರಕೆ ಇತ್ತೆ
ಸಟೆಯ ಮಾಯೆಯ ಗೆಲಿದು ವಿರಾಗಿ ಎನಿಸಿದೆ।
ಉನ್ಮನಿಯ ಉಯ್ಯಾಲೆಯಲ್ಲಿ ತೂಗಿ ನಲಿದು
ಅನುಭವ ಮಂಟಪದ ಹೊಂಗಳಶವಾದೆ ॥ 2 ॥

ವಚನ ವಾಙ್ಮಯಕ್ಕಂದು ಸಂಕಷ್ಟ ಎರಗಿರಲು
ಕಾಷಾಯ ಧರಿಸಿಯೂ ಖಡ್ಗವನು ನೀ ಹಿಡಿದೆ।
ಮುನ್ನಡೆಸಿ ಶರಣರ ವಾಙ್ಮಯವ ರಕ್ಷಿಸಿದೆ
ಚನ್ನ ಹುಣ್ಣಿಮೆಯಂದು ಉಳವಿಯಲಿ ಬಯಲಾದೆ ॥ 3 ॥

ನೀ ಪಾದವಿಟ್ಟುದು ಸುಕ್ಷೇತ್ರ ತಾನಾಯ್ತು
ನೀನುಡಿದ ಮಾತೆಲ್ಲ ದಿವ್ಯ ಶಾಸ್ತ್ರವದಾಯ್ತು
ಶರಣ ಧರ್ಮದ ಉಳಿವು ನಿನ್ನಿಂದಲೇ ಆಯ್ತು
ಸಚ್ಚಿದಾನಂದನ ಮೆಚ್ಚಿಗೆಯ ಮಗನಾದೆ ॥ 4 ॥

ಮರ್ತ್ಯಲೋಕದ ಭಕ್ತರ ಮನವ ಬೆಳಗಲೆಂದು ಇಳಿತಂದನಯ್ಯಾ ಶಿವನು;
ಕತ್ತಲೆಯ ಪಾಳೆಯವ ರವಿ ಹೊಕ್ಕಂತಾಯಿತ್ತಯ್ಯಾ
ಚಿತ್ತದ ಪ್ರಕೃತಿಯ ಹಿಂಗಿಸಿ,
ಮುಕ್ತಿ ಪಥವ ತೋರಿದನೆಲ್ಲ ಅಸಂಖ್ಯಾತ ಗಣಂಗಳಿಗೆ.
ತನುವೆಲ್ಲ ಸ್ವಯಲಿಂಗ, ಮನವೆಲ್ಲ ಚರಲಿಂಗ
ಭಾವವೆಲ್ಲ ಮಹಾಘನದ ಬೆಳಗು
ಚನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣ ಸಮ್ಯಕ್ ಜ್ಞಾನಿ ಚನ್ನಬಸವಣ್ಣನ ಶ್ರೀ ಪಾದಕ್ಕೆ ಶರಣೆಂದು,
ಎನ್ನ ಭವಂ ನಾಸ್ತಿಯಾಯಿತ್ತಯ್ಯಾ ಪ್ರಭುವೆ.

- ಜಗನ್ಮಾತಾ ಅಕ್ಕಮಹಾದೇವಿ

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಶರಣ ವ್ರತ ಸ್ವೀಕಾರ

ಶರಣ ಬಂಧುಗಳೇ,

ಶರಣ ವ್ರತ ಸ್ವೀಕಾರ ಮಾಡಿ ಶರಣ ಮೇಳಕ್ಕೆ ಅನೇಕರು ಬರುವುದುಂಟು. 40 ದಿವಸಗಳ ಗುರುಸಾರಾಯ ಸಂಪದ್ ವ್ರತ, 30 ದಿನಗಳ ಲಿಂಗ ಸಾರಾಯ ಸಂಪದ್ ವ್ರತ, 20 ದಿವಸಗಳ ಜಂಗಮ ಸಾರಾಯ ಸಂಪದ್ ವ್ರತ, 10 ದಿವಸಗಳ ಪ್ರಸಾದ ಸಾರಾಯ ಸಂಪದ್ ವ್ರತ. ಇವುಗಳಲ್ಲಿ ಯಾವುದನ್ನಾದರೂ ಸ್ವೀಕರಿಸಿ ದಿ. 14-01-2011ರಂದು ವ್ರತವನ್ನು ಪೂರ್ಣ ಗೊಳಿಸಬೇಕು.

1. ಗುರು ಸಾರಾಯ ಸಂಪದ್ ವ್ರತ - ಡಿಸೆಂಬರ್ 2ರಂದು
2. ಲಿಂಗ ಸಾರಾಯ ಸಂಪದ್ ವ್ರತ - ಡಿಸೆಂಬರ್ 12ರಂದು
3. ಜಂಗಮ ಸಾರಾಯ ಸಂಪದ್ ವ್ರತ - ಡಿಸೆಂಬರ್ 22ರಂದು
4. ಪ್ರಸಾದ ಸಾರಾಯ ಸಂಪದ್ ವ್ರತ - ಜನವರಿ 1ರಂದು

ಶರಣ ಮೇಳ ಉತ್ಸವ ಸಮಿತಿ,
ಬಸವ ಮಂಟಪ, 2035, 20ನೇ ಮುಖ್ಯ ರಸ್ತೆ, ಕಾರ್ಡ್‌ರೋಡ್
2ನೇ ಬ್ಲಾಕ್, ರಾಜಾಜಿ ನಗರ, ಬೆಂಗಳೂರು -560010

(ಕಾರಣಾಂತರದಿಂದ ಶರಣ ಮೇಳದ ರಸೀದಿ ಪುಸ್ತಕ ತಲಿಪದೇ ಇದ್ದಲ್ಲಿ ಮೇಲಿನ ವಿಳಾಸಕ್ಕೆ ಸಂಪರ್ಕಿಸಿ)

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 8970898205, 7760627640, 8892912123



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ
ಅಂಗವಾಗಿ ಇಪ್ಪತ್ನಾಲ್ಕನೆಯ

ಶರಣ ಮೇಳ

2011ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆ ಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ.ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾ ಭೂಮಿ, ತಪ್ಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ(ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14,15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಇಪ್ಪತ್ನಾಲ್ಕನೆಯ ಶರಣ ಮೇಳವು 2011ರ ಜನವರಿ 11, 12, 13, 14ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. [ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ.] ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗ ಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ.ದಿ. 11 ಮತ್ತು 12 ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರ

ರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು : 500 ರೂ.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ: 250 ರೂ.
3. ದಾನಿಗಳು: 1000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 125 ರೂ.

ಅನ್ನದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ
ಕಾಣಿಕೆಯನ್ನುಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/ 10000 ರೂಪಾಯಿಗಳ ಪುದುವಟ್ಟು (F.D.)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು ''ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ' ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of Indiaದ Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.)ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ,ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ)ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ
ದೂ : 08351-268014/268007/268140

ಸಂಪಾದಕೀಯ :

- ಮಾತಾಜಿ

1. ನಂದಿ - ಬಸವಣ್ಣ

ರಾಷ್ಟ್ರೀಯ ಬಸವ ದಳದ ನಿಷ್ಠಾವಂತ ಶರಣರು, ಉತ್ತಮ ಫೋಟೋ ಮತ್ತು ವೀಡಿಯೋ ಗ್ರಾಫರರಾದ ಶರಣ. ಮಹಾದೇವ ಬೇಲೂರೆ ಅವರು ಭಾಲ್ಕಿ ತಾಲ್ಲೋಕಿನ ಭಾತಾಂಬ್ರಾ ಊರಿನವರು. ಹೊಸ ಮನೆಯನ್ನು ಕಟ್ಟಿಸಿದ್ದು ಗುರು ಪ್ರವೇಶದೊಡನೆ ಗೃಹ ಪ್ರವೇಶ ಮಾಡಬೇಕೆಂದು ದೇವ (ಭಾನು)ವಾರ, ದಿ.24-10-2010ರಂದು ನಮ್ಮನ್ನು ಆಹ್ವಾನಿಸಿದ್ದರು. ಪೂಜೆ ಎಲ್ಲ ಆದ ನಂತರ ನಮ್ಮ ಪ್ರಸಾದಕ್ಕೆ ವ್ಯವಸ್ಥೆ ಮಾಡಿದ್ದರು. ನಾವು ಪ್ರಸಾದಕ್ಕೆ ಕುಳಿತ ಕೋಣೆಯಲ್ಲಿ ಚೌಕಾಕಾರದ ತಟ್ಟೆಯಲ್ಲಿ ಸಿದ್ಧವಾಗಿದ್ದ ಲಾಡುಗಳನ್ನು ಜೋಡಿಸಿ ಇಡಲಾಗಿತ್ತು. ಅದರ ಮೇಲೆ ಒಂದು ಚಿಕ್ಕ ನಂದಿಯ ವಿಗ್ರಹವನ್ನು ಇಡಲಾಗಿತ್ತು. ಇದೇ ಮೊದಲ ಬಾರಿಗೆ ಅದನ್ನು ನಾನು ನೋಡಿದ್ದು ಕುತೂಹಲ ಕೆರಳಿತು. ಇದೇನೆಂದು ಕೇಳಿದಾಗ ಅದೇ ಕೋಣೆಯಲ್ಲೇ ಪ್ರಸಾದಕ್ಕೆ ಕುಳಿತಿದ್ದ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮೀಜಿ ಹೇಳಿದರು,''ಇಲ್ಲಿ, ನಮ್ಮ ಬೀದರ ಜಿಲ್ಲೆಯಲ್ಲಿ ಒಂದು ಸಂಪ್ರದಾಯವಿದೆ. ಅಡಿಗೆ ಎಲ್ಲ ಸಿದ್ಧವಾದ ಮೇಲೆ ನಂದಿ ವಿಗ್ರಹವನ್ನಿಟ್ಟು ಅದಕ್ಕೆ ಪೂಜೆ ಸಲ್ಲಿಸಿ, ನೈವೇದ್ಯ ಮಾಡಿ, ನಂತರ ಊಟ ಎಡೆ ಮಾಡಲಾಗುವುದು. ಕೇಳಿ ಅಚ್ಚರಿ ಎನಿಸಿತು, ಆನಂದವೂ ಆಯಿತು.

ಮಡಿವಾಳ ಮಾಚಿದೇವರು ಹೇಳುತ್ತಾರೆ,

ಸಂಗಿಸುವಲ್ಲಿ, ಮಹಾಸಂಗಿಸುವಲ್ಲಿ
ಪ್ರಸಾದ ಸಂಗಿಸುವಲ್ಲಿ ಬಸವಣ್ಣನ ನೆನೆವುದು.

ಎಂದು. ಗುರು ಬಸವಣ್ಣನವರನ್ನು ನಂದಿಯ ಅವತಾರವೆಂದು ಪುರಾಣೀಕರಿಸಿ, ನಿರಾಕಾರ ದೇವರ ಸಂಕೇತವಾಗಿ ಗೋಳಾಕಾರದ ಇಷ್ಟಲಿಂಗವನ್ನು ಪೂಜಿಸುವಂತೆ, ನಂದಿಯಾಕಾರದಲ್ಲಿ ಗುರು ಬಸವಣ್ಣನವರನ್ನು ಪೂಜಿಸುವ ಸಂಪ್ರದಾಯವು ಸಾಗಿ ಬಂದಿದೆ.

ಆಯಿತ್ತು ಬಸವಾ ನಿನ್ನಿಂದ ಗುರುಸ್ವಾಯತವೆನಗೆ
...............ಆಯಿತ್ತು ಬಸವಾ ನಿನ್ನಿಂದ ಪ್ರಸಾದ ಸ್ವಾಯತವೆನಗೆ

ಎಂಬ ಅಲ್ಲಮಪ್ರಭುದೇವರ ವಾಣಿಯಂತೆ ಕೃತಜ್ಞತೆಯಿಂದ ಪ್ರಸಾದ ಸ್ವೀಕಾರ (ಎಡ) ಮಾಡುವ ಮುನ್ನ ಗುರು ಬಸವಣ್ಣನವರಿಗೆ ಅರ್ಚನೆ ಸಲ್ಲಿಸಿ, ಅರ್ಪಣೆ ಮಾಡುವುದು ಸದಾಚಾರದ ನಡೆ. ಇಷ್ಟು ಮಾತ್ರವಲ್ಲ ಮದುವೆ ಮಾಡಿ ಮಗಳನ್ನು ಗಂಡನ ಮನೆಗೆ ಕಳಿಸುವಾಗ ನಂದಿಯ ವಿಗ್ರಹ ಕೊಡಲಾಗುವುದು. ಎಂದು ಸ್ವಾಮೀಜಿ ಹೇಳಿದರು. ಚೆನ್ನೈಗೆ ಹೋದಾಗ ತಿಳಿದ ವಿಷಯನೆಂದರೆ ಅಲ್ಲಿಯ ಕೆಲವು ಲಿಂಗಾಯತರ ಮನೆಯಲ್ಲಿ ತಗಡಿನಲ್ಲಿ ಕೊರೆದ ಗುರು ಬಸವಣ್ಣನವರ ಮೂರ್ತಿ ಇರುವುದು, ಮತ್ತು ಮದುವೆ ಮಾಡಿ ಮಗಳನ್ನು ಕಳಿಸುವಾಗ ಅಂತಹ ಮೂರ್ತಿಯನ್ನು ಕಡ್ಡಾಯವಾಗಿ ಕೊಡುವ ಸಂಪ್ರದಾಯ ಇರುವುದು ತಿಳಿಯಿತು. ಬಹುಶಃ ಬಸವಣ್ಣನವರ ಚಿತ್ರಪಟ ಕೊಡುವ ಆಚರಣೆ ನಂತರ ನಂದಿಯ ಮೂರ್ತಿಯಾಗಿ ರೂಢಿಗೊಂಡಿರಬೇಕು. ಈಗ ಕಾಲ ಬದಲಾಗಿದೆ. ಬಹುಬಗೆಯ ಗುರು ಬಸವಣ್ಣನವರ ಮೂರ್ತಿಗಳು ವಿವಿಧ ಬೆಲೆಯಲ್ಲಿ ಸಿಗುತ್ತಿರುವ ಕಾರಣ ಪ್ರಸಾದದ ಪಾತ್ರೆ, ತಟ್ಟೆಯ ಮೇಲೆ ಮಾನವಾಕಾರದ ಮೂರ್ತಿಯನ್ನು ಇಟ್ಟು ಪೂಜೆ ಸಲ್ಲಿಸುವ ಬಗ್ಗೆ ಎಲ್ಲರೂ ಆಲೋಚಿಸಬೇಕು. ಬೀದರ ಜಿಲ್ಲೆಯಲ್ಲಿ

(ಇನ್ನಿತರ ಕಡೆಯಲ್ಲೂ ಇದ್ದಿರಬಹುದು) ಮದುವೆಯ ಗಂಡಿನ ವಸ್ತ್ರಗಳಲ್ಲಿ ಮೊಟ್ಟಮೊದಲು ಕೊಡುವುದು ಲಿಂಗವಸ್ತ್ರವನ್ನು. ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿ ಲಿಂಗಧಾರಣೆ ಕಡ್ಡಾಯ. ಹೀಗಾಗಿ ಹೆಣ್ಣುಗಂಡಿಗೆ ಕಡ್ಡಾಯವಾಗಿ ಲಿಂಗಧಾರಣೆ ಮಾಡಿಸಿ ಕರಡಿಗೆ ಕೊಡಲಾಗುವುದು.

ಇಷ್ಟು ದಿವಸ ಸಾಮೂಹಿಕ ಅಡಿಗೆ ತಯಾರಾದ ಮೇಲೆ (ಹಳ್ಳಿಗಳಲ್ಲಿ ನಿತ್ಯದ ಅಡಿಗೆ ಆದ ಮೇಲೆ ಸಹ) ಪಾತ್ರೆಗಳ ಹೆಗಲು (ಬಾಯಿ) ಒರೆಸಿ 3 ಎಳೆ ಭಸ್ಮವನ್ನು ಮಗ್ಗುಲಲ್ಲಿ, ಮುಚ್ಚಳದ ಮೇಲೆ ಧರಿಸಿ ತೀರ್ಥ ಮಾಡಿ ಸಿಂಪಡಿಸಿ ನಂತರ ಎಡೆಮಾಡಲಾಗುತ್ತಿತ್ತು. ಇನ್ನು ಮುಂದೆ ಸಾಮೂಹಿಕ ಪ್ರಸಾದವಿದ್ದಲ್ಲಿ ಗುರು ಬಸವಣ್ಣನವರ ಮೂರ್ತಿಯನ್ನಿಟ್ಟು ಪೂಜಿಸಿ, ನಂತರ ಒಂದು ತಟ್ಟೆಯಲ್ಲಿ ಮಾಡಿದ ಪದಾರ್ಥಗಳೆಲ್ಲವನ್ನು ಜೋಡಿಸಿ ನೈವೇದ್ಯ ಮಾಡಿ, ಆ ಪದಾರ್ಥಗಳನ್ನು ಪುನಃ ಮಾಡಿದ ಅಡಿಗೆಯೊಳಕ್ಕೆ ಬೆರಸಿ ಪ್ರಸಾದೀಕರಿಸಬೇಕು. ಶರಣ ಬಂಧುಗಳು ಶರಣ ಸಂಗಮದ ನಂತರ ನಡೆಯುವ ವಾರದ ದಾಸೋಹದಂದು ಸಹ ಈ ಪ್ರಸಾದೀಕರಣ ಕಾರ್ಯಕ್ರಮವನ್ನು ನೆರವೇರಿಸಬೇಕು.

ನಂದಿಯನ್ನು ಪ್ರಧಾನ ಪೂಜ್ಯ ವಸ್ತುವನ್ನಾಗಿ ಇಟ್ಟ ಎಲ್ಲ ದೇವಾಲಯಗಳು ಕಲ್ಯಾಣದ ಬಸವಣ್ಣನವರನ್ನು ಕುರಿತವೇ ಆದ ಸಾಮಾಜಿಕ/ ಧಾರ್ಮಿಕ ಕೇಂದ್ರಗಳು. ಆದ್ದರಿಂದ ಸಾಧ್ಯವಾದಷ್ಟೂ ದೇವಾಲಯ ಸಮಿತಿಗಳವರನ್ನು ಮನವೊಲಿಸಿ ಅಲ್ಲೆಲ್ಲ ಗುರು ಬಸವಣ್ಣನವರ ಮೂರ್ತಿಯನ್ನು ಕೂರಿಸುವ ಪರಿಪಾಠವನ್ನು ಆರಂಭಿಸಬೇಕು. ನಂದಿಯನ್ನು ತೆಗೆದು ಕೂರಿಸುವ ಧೈರ್ಯವಿಲ್ಲದ ಜನರಿದ್ದಲ್ಲಿ ಅದರ ಮುಂದೆಯೇ ಮಾನವಾಕಾರದ ಬಸವಣ್ಣನವರನ್ನು ಕೂರಿಸಬೇಕು. ಉಳವಿಯ ಚನ್ನಬಸವಣ್ಣನವರ ಉಳವಿ ಮತ್ತು ಧಾರವಾಡದ ಎರಡೂ ಗುಡಿಗಳಲ್ಲಿ ಮೊದಲು ಕೇವಲ ನಂದಿ ಇದ್ದವು. ಆಡಳಿತ ಮಂಡಳಿಯವರು ಎರಡೂ ಕಡೆ ಚನ್ನಬಸವಣ್ಣನವರ ಮೂರ್ತಿಗಳನ್ನು ಕೂರಿಸಿರುವುದು ಅಭಿನಂದನೀಯ. ಮೊದಲಿಗಿಂತ ಈಗ ತಿಳುವಳಿಕೆ, ವಚನ ಸಾಹಿತ್ಯದ ಜ್ಞಾನ ಹೆಚ್ಚಾಗುತ್ತಿರುವುದರಿಂದ ಕೇವಲ ನಂದಿಯ ವಿಗ್ರಹವಿರುವ ಗುಡಿಗಳಲ್ಲಿ ಗುರು ಬಸವಣ್ಣನವರ ಭಾವಚಿತ್ರ ಹಾಕಿಸುವ, ಮೂರ್ತಿ ಕೂರಿಸುವ ಕೆಲಸ ತ್ವರಿತಗತಿಯಲ್ಲಿ ಸಾಗಬೇಕು.

2. ಅರುಂಧತಿರಾಯಳ ದೇಶದ್ರೋಹಿ ಹೇಳಿಕೆ

ಬೂಕರ್ ಪ್ರಶಸ್ತಿ ವಿಜೇತೆ ಅರುಂಧತಿ ರಾಯ್ ಅಂತರರಾಷ್ಟ್ರೀಯ ಖ್ಯಾತಿಯ ಲೇಖಕಿ. ಕೇರಳ ಮೂಲದ ಈ ಮಹಿಳೆಯ ಕೃತಿ "ಗಾಡ್ಸ್ ಆಫ್ ಸ್ಮಾಲ್ ಥಿಂಗ್ಸ್" ಕೃತಿಗೆ ಬೂಕರ್ ಪ್ರಶಸ್ತಿ ದೊರೆತಿದೆ. ವಿಲಕ್ಷಣ ವಿಚಾರಧಾರೆಯ ಈ ಮಹಿಳೆ, ಕಾಶ್ಮೀರವು ಎಂದೂ ಭಾರತದ ಅವಿಭಾಜ್ಯ ಅಂಗವಾಗಿರಲಿಲ್ಲ. ಅಲ್ಲಿಯವರಿಗೆ ಸ್ವಾಯತ್ತತೆ ದೊರೆಯಬೇಕು ಎಂಬ ಹೇಳಿಕೆ ನೀಡಿದ್ದಾರೆ. ಇಂಥ ದೇಶವಿರೋಧಿ ಹೇಳಿಕೆ ನೀಡಿದ ಆಕೆಯನ್ನು ಬಂಧಿಸಬೇಕೆಂದು ಹಲವಾರು ಸಂಘಟನೆಗಳವರು ಆಗ್ರಹಿಸಿದ್ದಾರೆ. ಕೇಂದ್ರ ಸರ್ಕಾರವು ಮೌನ ವಹಿಸಿದೆ.

ಕೆಲವು ಭಾರತೀಯರಿಗೆ ಇದೇ ನೆಲದಲ್ಲಿ ಹುಟ್ಟಿ, ಬೆಳೆದು, ಇಲ್ಲಿಯ ನೀರನ್ನು ಕುಡಿದು, ಗಾಳಿಯನ್ನು ಸೇವಿಸಿ, ಅನ್ನವನ್ನುಂಡರೂ ದೇಶದ ಬಗ್ಗೆ ಅಭಿಮಾನವಿರುವುದಿಲ್ಲ. ಜಾತೀಯತೆ, ಅಸ್ಪೃಶ್ಯತೆ, ಮೂಢ ನಂಬಿಕೆಗಳಿಂದಾಗಿ ಈ ದೇಶಕ್ಕೆ ಒಂದು ಕಲಂಕ ಅಂಟಿದೆಯಾದರೂ ಅದು ದೇಶದ ತಪ್ಪಲ್ಲ. ದೇಶವಾಸಿಗಳಾದ ಕೆಲವು ಸಣ್ಣ ಮನಸ್ಸಿನವರ ತಪ್ಪು. ಅನೇಕ ಅವಗುಣಗಳ ಮಧ್ಯೆಯೂ ಭಾರತ ದೇಶವು ತನ್ನ ಸಾಂಸ್ಕೃತಿಕ, ಧಾರ್ಮಿಕ ಸಂಪತ್ತು ಮತ್ತು

ವೈವಿಧ್ಯತೆಯಿಂದಾಗಿ ಹೆಮ್ಮೆ ಪಡುವಂತಹ ದೇಶವಾಗಿದೆ. ಇಡೀ ಜಗತ್ತು ಈ ದೇಶದ ಬಗ್ಗೆ ಒಂದು ಬಗೆಯ ಕುತೂಹಲ ಹಾಗೂ ಗೌರವ ತಾಳಿದೆ. ಜಾತೀಯತೆ, ಮೂಢನಂಬಿಕೆ, ಅಸ್ಪೃಶ್ಯತೆ ಆಂತರಿಕ ಸಮಸ್ಯೆಗಳೆಂದು ಭಾವಿಸಿ ಇವುಗಳ ನಿರ್ಮೂಲನೆಗೆ ಪ್ರಯತ್ನ ಮಾಡಬೇಕು.

ಕಾಶ್ಮೀರವು ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಭಾರತದ ಅವಿಭಾಜ್ಯ ಅಂಗ. ಒಂದು ಕಾಲದಲ್ಲಿ ಶೈವ ಸಿದ್ಧಾಂತದ ಪ್ರಮುಖ ಕೇಂದ್ರವಾಗಿತ್ತು. ಭೌಗೋಳಿಕವಾಗಿ ಭಾರತಮಾತೆಯ ಕಿರೀಟ. ಇಸ್ಲಾಮಿನ ಪ್ರಭಾವದಿಂದ ಭಾರತ ಮಾತೆಯ ಎರಡು ಭುಜಗಳು ಕತ್ತರಿಸಲ್ಪಟ್ಟು ಪಾಕಿಸ್ತಾನ ಮತ್ತು ಬಂಗ್ಲಾದೇಶಗಳಾಗಿವೆ. ಹೀಗಿದ್ದಾಗ ಶಿರ (ಕಿರೀಟ) ದಂತಿರುವ ಕಾಶ್ಮೀರವನ್ನು ಕತ್ತರಿಸಬೇಕೆಂಬ ಅರುಂಧತಿ ರಾಯ್‌ರಂಥವರ ಹೇಳಿಕೆ ಖಂಡನಾರ್ಹ. ಸ್ವತಂತ್ರ ರಾಷ್ಟ್ರವಾಗುವಷ್ಟು ಶಕ್ತಿ ಕಾಶ್ಮೀರಕ್ಕಿಲ್ಲ. ಭಾರತದಿಂದ ಪ್ರತ್ಯೇಕಗೊಂಡು ಸ್ವಾಯತ್ತತೆ ಪಡೆದರೆ ಸುಲಭವಾಗಿ ಪಾಕಿಸ್ತಾನದಿಂದ ನುಂಗಲ್ಪಡುವುದು. ಮುಸಲೀಮರು ಭಾರತದ ಸಂವಿಧಾನದ ಅಡಿಯಲ್ಲಿ ಸ್ವತಂತ್ರವಾಗಿ, ಸುಖವಾಗಿ ಸುರಕ್ಷಿತವಾಗಿ ಇರುವಷ್ಟು ಪಾಕಿಸ್ತಾನದಲ್ಲಿಲ್ಲ. ಅಲ್ಲಿ ನಿತ್ಯವೂ ಭಯೋತ್ಪಾದನೆ, ಬಾಂಬ್ ಸ್ಫೋಟಗಳು.

ಧರ್ಮದ ಹೆಸರಿನಲ್ಲಿ ದೇಶವನ್ನು ಒಡೆಯುವುದೇ ಸರಿಯಲ್ಲ. ಅದು ದೇಶವಿರೋಧಿ ಕೆಲಸವಷ್ಟೇ ಅಲ್ಲ ದೇವವಿರೋಧಿ ಕೆಲಸವೂ ಆಹುದು. ಭಾರತದ ಸಂವಿಧಾನ ಜಾತ್ಯತೀತವಾಗಿರುವುದಷ್ಟೆ ಅಲ್ಲ ಧರ್ಮಾತೀತವಾಗಿಯೂ ಇದ್ದು ಮಹಿಳೆಯರ ಹಕ್ಕನ್ನು ಸಂರಕ್ಷಿಸುತ್ತದೆ. ಅರುಂಧತಿರಾಯ್ ಅವರ ತಾಯಿ ಮೇರಿ ರಾಯ್ ಸಿರಿಯನ್ ಕ್ರಿಶ್ಚಿಯನ್ ಕಾಯಿದೆ ಪ್ರಕಾರ ಪಿತ್ರಾರ್ಜಿತ ಆಸ್ತಿಯ ಹಕ್ಕನ್ನು ಕಳೆದುಕೊಂಡು ನ್ಯಾಯಾಲಯಕ್ಕೆ ಹೋದಾಗ ಕೋರ್ಟ್ ಮಹಿಳೆಯರ ಹಕ್ಕನ್ನು ಎತ್ತಿ ಹಿಡಿದಿದೆ. ಹೀಗಾಗಿ ಕ್ರೈಸ್ತ, ಇಸ್ಲಾಂ ಕಾನೂನು ಕೊಡದೆ ಇರುವ ವಿಶೇಷ ಸವಲತ್ತನ್ನು ಭಾರತದ ಸಂವಿಧಾನ ಮತ್ತು ನ್ಯಾಯಾಲಯ ಕೊಡುತ್ತಿವೆ.

ಕೇಂದ್ರ ಸರ್ಕಾರ ಎಂಥದೇ ಪ್ರಸಂಗದಲ್ಲಿಯೂ ಭಾರತ ಮಾತೆಯ ಶಿರಸ್ಸಿನಂತಿರುವ ಕಾಶ್ಮೀರವನ್ನು ಬಿಟ್ಟುಕೊಡಬಾರದು. ಮುಸ್ಲಿಂ ಭಯೋತ್ಪಾದಕರಿಗೆ ಮಣಿದರೆ ಭಾರತವು, ಕುಷ್ಠರೋಗ ಹತ್ತಿದವನ ಅಂಗಾಂಗಗಳು ತುಂಡಾಗುತ್ತ ಹೋಗುವಂತೆ, ತುಂಡಾಗುತ್ತ ಹೋಗುತ್ತದೆ. ಸಾಮಾನ್ಯವಾಗಿ ಶೇಕಡಾ 6 ರಷ್ಟು ಜನ ಮಾತ್ರ ಸ್ವಾಯತ್ತತೆ ಬಯಸುವರಂತೆ. ಬಾಕಿ ಎಲ್ಲರೂ ಭಾರತದಲ್ಲೇ ಇರಲು ಬಯಸುತ್ತಾರೆ. ಪಾಕಿಸ್ತಾನ ಪ್ರಚೋದಿತ ಕೆಲವೇ ಕೆಲವು ಭಯೋತ್ಪಾದಕರಿಗೆ, ಅರುಂಧತಿಯಂತಹ ವಿಕ್ಷಿಪ್ತ ಮನಸ್ಸಿನವರ ಬಡಬಡಿಕೆಗೆ ಮಣಿದು ಕಾಶ್ಮೀರವನ್ನು ಪ್ರತ್ಯೇಕಿಸದೆ ಈ ದೇಶದ ಅವಿಭಾಜ್ಯ ಅಂಗವಾಗಿ ಉಳಿಸಲು ಸರ್ಕಾರವು ಎಲ್ಲ ವ್ಯವಸ್ಥೆ ಮಾಡಬೇಕು.

3. ಕಾಶೀನಾಥ ಶಾಸ್ತ್ರಿಗಳ ನಿಜ ಜೀವನ ಚರಿತ್ರೆ - ಗ್ರಂಥ ವಿಮರ್ಶೆ

ಬಸವ ಧರ್ಮ ಪ್ರಕಾಶನ, ಉದ್ದಿಮೆ ವಸಾಹತು, ಎಂ.ಎಸ್.ಕೆ. ಮಿಲ್ ರಸ್ತೆ, ಕಲಬುರ್ಗಿ - 585102 ಇವರು ಮರು ಮುದ್ರಿಸಿರುವ (ಬೆಲೆ 50ರೂ) ಬಹಳ ಮಹತ್ವಪೂರ್ಣ ಪುಸ್ತಕ "ಪಂ. ಕಾಶೀನಾಥ ಶಾಸ್ತ್ರಿಗಳ ನಿಜ ಜೀವನ ಚರಿತ್ರೆ," 2010ನೆಯ ಇಸವಿಯ ವಿಜಯ ದಶಮಿಯಂದೇ ಬಿಡುಗಡೆಯಾಗಿದೆ. ಪ್ರಥಮ ಮುದ್ರಣ ಬೆಳಕು ಕಂಡಿರುವುದು 1935ನೆಯ ವಿಜಯ ದಶಮಿಯಂದು. ಇದರ ಮೂಲ ಲೇಖಕರು ಎನ್. ಗುಂಡಶಾಸ್ತ್ರಿ ಮೈಸೂರು. ಇವರು ಬರೆದ

ಮಾತುಗಳು ಬಹಳ ಅಧಿಕೃತ. ಏಕೆಂದರೆ ಅವರು ಒಂದನೆಯದಾಗಿ ಬ್ರಾಹ್ಮಣರು; ಎರಡು, ಅವರು ಮೈಸೂರು ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್‌ದಲ್ಲಿ ಮೇನೇಜರ್ ಆಗಿದ್ದು ಎಲ್ಲವನ್ನೂ ಪ್ರತ್ರಕ್ಷವಾಗಿ ಕಂಡವರು.

ನಮ್ಮ ವಿಚಾರಧಾರೆಗೆ ಸೂಕ್ತ ಆಧಾರ ಮತ್ತು ಪುಷ್ಟಿ ಕೊಡುವ ಪುಸ್ತಕವಿದು.

1. ಲಿಂಗಾಯತ ಮತ್ತು ವೀರಶೈವ ಬೇರೆ ಬೇರೆ.
2. ರೇಣುಕಾಚಾರ್ಯರು ಕೇವಲ ಕಲ್ಪನೆ
3. ವಿರಕ್ತ ವರ್ಗ ಮತ್ತು ಗುರು ವರ್ಗ ಎಂಬ ವಿಭಜನೆ ಇತ್ತೀಚಿನ ಸೃಷ್ಟಿ

ಪಂ.ಕಾಶೀನಾಥ ಶಾಸ್ತ್ರಿಗಳು ಮಾಡಿದ ಪಾಪವನ್ನು ಎಂದೆಂದೂ ತೊಳೆಯಲು ಸಾಧ್ಯವಿಲ್ಲ. ಪಂಚಾಚಾರ್ಯರೆಂಬ ಕೃತಕ ಸೃಷ್ಟಿಯನ್ನು ಮಾಡಿ ಲಿಂಗಾಯತರ ತಲೆಯೊಳಗೆ ತೂರಿಸಿ, ಐತಿಹಾಸಿಕವೆಂಬಂತಹ ಭ್ರಮೆಯನ್ನು ಈ ಪುಣ್ಯಾತ್ಮ(ಪಾಪಾತ್ಮ) ಹುಟ್ಟಿಸಿ ಲಿಂಗಾಯತ ಸಮಾಜದ ದಿಕ್ಕು ಕೆಡಿಸಿಬಿಟ್ಟರು. ಮತ್ತೊಂದು ಕಡೆ ಹಾನುಗಲ್ ಕುಮಾರ ಸ್ವಾಮಿಗಳ ಪಾಪದ ಕೂಸಾಗಿ ವೀರಶೈವ ಮಹಾಸಭೆ ಹುಟ್ಟಿ ಲಿಂಗಾಯತರು ವೀರಶೈವರೆಂಬ ಭ್ರಮೆಯನ್ನು ಹುಟ್ಟಿಸಿತು. ಗುರು ಬಸವಣ್ಣನವರೆಂಬ ಕ್ರಾಂತಿಕಾರಿ ಯುಗಪುರುಷರಿಂದ ಹುಟ್ಟಿದ ಲಿಂಗಾಯತ ಧರ್ಮದ ಶ್ರೇಷ್ಠ ಶರಣ ಪರಂಪರೆಯು 12ನೆಯ ಶತಮಾನದಿಂದ ಇತ್ತೀಚಿನವರೆಗೆ ಎಲ್ಲ ಜಾತಿ ಮತಗಳವರಿಗೆ ಭಕ್ತ, ಗುರು, ಜಂಗಮವಾಗುವ ಅವಕಾಶ ನೀಡಿ ಕೀರ್ತಿಗೆ ಪಾತ್ರವಾಗಿದ್ದುದು, ಹಾನುಗಲ್ ಕುಮಾರ ಸ್ವಾಮಿಗಳಿಂದ ಕಲಂಕಿತವಾಗಿ ಜಂಗಮವನ್ನು ಇಂದು ಜಾತಿಯಾಗಿ ವಿಕೃತಗೊಳಿಸಿತು. ಈ ಉಭಯ ಮಹನೀಯರು ಮತ್ತು ವೇದ ಶಾಸ್ತ್ರ ಸಂಸ್ಕೃತ ಪಾಠಶಾಲೆಗಳನ್ನು ತೆಗೆದು ಲಿಂಗಾಯತ ಸಮಾಜವನ್ನು ವೈದಿಕೀಕರಣಗೊಳಿಸಿದ ಇತ್ತೀಚಿನ ಅನೇಕ ವಿರಕ್ತ ಸ್ವಾಮಿಗಳು ತಾವು ಮಾಡಿರುವ, ಮಾಡುತ್ತಿರುವ ಅಪರಾಧವೇನೆಂಬುದನ್ನು ಅರಿಯದೆ ಶರಣ ಪರಂಪರೆ - ಸಂಸ್ಕೃತಿ ವಿಕೃತಗೊಳ್ಳಲು ಕಾರಣರಾಗಿದ್ದಾರೆಂದರೆ ಉತ್ಪ್ರೇಕ್ಷೆಯಲ್ಲ.

ಮೈಸೂರಿನ ಸ್ಟಾರ್ ಪತ್ರಿಕೆಯಲ್ಲಿ ಬಸವ ತತ್ವಕ್ಕೆ ಸಂಬಂಧಿಸಿದ ಲೇಖನಗಳು ಕಾಶಿನಾಥ ಶಾಸ್ತ್ರಿಗಳ ಬರಹಗಳಿಗೆ ಪ್ರತ್ಯುತ್ತರವಾಗಿ ಪ್ರಕಟವಾಗುತ್ತಲಿದ್ದವು. ಅವುಗಳಿಗೆ ಪ್ರತಿಯಾಗಿ ಶಾಸ್ತ್ರಿಗಳು ಬೇರೆ ಬೇರೆ ಹೆಸರುಗಳಿಂದ ಪ್ರತಿಕ್ರಿಯೆ ನೀಡುತ್ತಿದ್ದು ಅವು ಪಂಚಾಚಾರ್ಯ ಪ್ರಭಾದಲ್ಲಿ ಪ್ರಕಟವಾಗುತ್ತಿದ್ದವು. ಅಂಥ ಒಂದು ಬರಹದ ಭಾಷೆ ನೋಡಿರಿ. (ಪಂ.ಪ್ರ.ಸಂ.1, ಸಂಚಿಕೆ 24, ಪುಟ 8, ದಿ.24-10-1927. ಗುರುಭಕ್ತ ಎಸ್. ಸಿದ್ದಪ್ಪ ಎನ್ನುವವರ ಹೆಸರಿನಲ್ಲಿ ಏಕಾಶಿಪುರದ ಪಿಶಾಚಿಯು ಎಂಬ ಶೀರ್ಷಿಕೆಯಲ್ಲಿ ಪ್ರಕಟಗೊಂಡ ಉತ್ತರ. "ಈ ಬಸವ ಕುಲದವನು ತನ್ನಂತೆ ಸರ್ವರನ್ನು ಮಾಡಿಕೊಳ್ಳುವುದಕ್ಕೋಸ್ಕರ ಉದ್ಯುಕ್ತನಾಗಿರುವುದನ್ನು ನೋಡಿದರೆ ನಗೆಯು ಬರುವಂತಿದೆ. ಇವನು ಗುರುಭಕ್ತಿ ಶೂನ್ಯನಾಗಿ ಪಿಶಾಚಿಯಂತೆ ಮನ ಬಂದಂತೆ ಕುಣಿದಾಡುತ್ತಿರುವನು."

ಇಲ್ಲಿ ಗುರುಭಕ್ತಿ ಎಂದರೆ ಕಾಶೀನಾಥ ಶಾಸ್ತ್ರಿಗಳ ಅಭಿಪ್ರಾಯದಲ್ಲಿ ಪಂಚ ಪೀಠಾಧೀಶರ ಮೇಲಿನ ಭಕ್ತಿ ಎಂದರ್ಥ. ಈ ಬೈಗುಳದ ಪತ್ರದಲ್ಲಿ ಬಸವ ಕುಲದವನು ತನ್ನಂತೆ ಸರ್ವರನ್ನು ಮಾಡಿಕೊಳ್ಳುವವನು. ಎಂಬ ಸತ್ಯವಿದೆ. ಯಾರಿಗೆ ಬೇಕಾದರೂ ಲಿಂಗದೀಕ್ಷೆ ಕೊಡುವ ಪರಂಪರೆ ಗುರು ಬಸವಣ್ಣನವರಿಂದ ಆರಂಭವಾಗಿ ಮಾದೇಶ್ವರ, ಸಿದ್ಧಲಿಂಗೇಶ್ವರ, ಷಣ್ಮುಖ ಶಿವಯೋಗಿ,

ಗುರು ಮಲ್ಲೇಶ್ವರರವರೆಗೆ ಸಾಗಿ ಬಂದುದು ನಂತರ ನಿಂತು ಹೋಯಿತು ಎಂಬುದು ಗಮನಾರ್ಹ. ಕೊಲ್ಹಾಪುರದ ರಾಜ ಛತ್ರಪತಿ ಶಾಹು ಅವರು ಅಸಂಖ್ಯಾತ ಅನುಯಾಯಿಗಳೊಡನೆ ಲಿಂಗಾಯತ ಧರ್ಮವನ್ನು ಸ್ವೀಕರಿಸುವ ಅಪೇಕ್ಷೆ ವ್ಯಕ್ತಪಡಿಸಿದಾಗ, ಹುಟ್ಟು ಲಿಂಗಾಯತರಿಗೆ ಮಾತ್ರ ದೀಕ್ಷೆ ಕೊಡುವುದಾಗಿ ಹೇಳಿ ಕೊಲ್ಹಾಪುರದ ಮುರುಘಾ ಮಠದವರು ದೀಕ್ಷೆ ನೀಡಲು ನಿರಾಕರಿಸಿದರು. ಒಂದು ವೇಳೆ ದೀಕ್ಷೆ ಕೊಟ್ಟಿದ್ದೇ ಆದರೆ ಕರ್ನಾಟಕ - ಮಹಾರಾಷ್ಟ್ರ ಗಡಿಸಮಸ್ಯೆಗಳೇ ಇರುತ್ತಿರಲಿಲ್ಲ.

ಡಾ॥ ಅಂಬೇಡ್ಕರರಿಗೆ ಬಸವ ತತ್ವ (ಲಿಂಗಾಯತ ಧರ್ಮ)ದ ಮರ್ಮ ತಿಳಿದಿದ್ದರೆ ಅವರು ಬೌದ್ಧ ಧರ್ಮ ಸ್ವೀಕಾರ ಮಾಡುತ್ತಿರಲಿಲ್ಲ. ಎಂದು ಕೆಲವರು ಹೇಳುವುದುಂಟು. ಡಾ॥ ಅಂಬೇಡ್ಕರರಿಗೆ ಬಸವ ತತ್ವ ಗೊತ್ತಿತ್ತು; ಆದರೆ ಲಿಂಗಾಯತ ಸಮಾಜವು ಆಗಲೇ ಜಡಗಟ್ಟಿ ಮಡುಗಟ್ಟಿ ಹೋಗಿದ್ದರಿಂದ ಅವರು ಇದರಿಂದ ಆಕರ್ಷಿತರಾಗಲಿಲ್ಲ.

ಹಿಂದೆ ವಿರಕ್ತರು ಅಷ್ಟಿಷ್ಟು ಪ್ರಗತಿಪರರಾಗಿದ್ದರೂ ನಂತರ ನುಸುಳಿದ ವೀರಶೈವ ವಿಚಾರ ಧಾರೆಯಿಂದ ಜಾತಿವಾದದ ಬೇರು ಲಿಂಗಾಯತ ಸಮಾಜದಲ್ಲಿಳಿದು ಮೇಲು ಕೀಳೆಂಬ ವರ್ಗೀಕರಣ ಇದರಲ್ಲೂ ಉಂಟಾಯಿತು.

ಕಾಶೀನಾಥ ಶಾಸ್ತ್ರಿ ಅಂಡ್ ಪಂಚಪೀಠಾಧೀಶರ ಕಂಪೆನಿಯ ವಿಚಾರ - ವೀರಶೈವ ವಿಚಾರಧಾರೆಯನ್ನು ಪ್ರತಿಭಟಿಸುವ ಕಾರ್ಯ ಅಲ್ಲಲ್ಲಿ ನಡೆಯುತ್ತಿತ್ತು ಎಂಬುದರ ಬಗ್ಗೆ ಒಂದು ಪತ್ರವಿದೆ.

ಬಿಡಾಡಿ ಜಂಗಮ ಎಂಬ ಶೀರ್ಷಿಕೆಯಡಿ ಪಂಚಾಚಾರ್ಯ ಪ್ರಭಾದಲ್ಲಿ (ಸಂ.4, ಸಂಚಿಕೆ 9, ಪುಟ 3, 30-6-1930) ಮುದ್ರಣಗೊಂಡಿದೆ.

"ಶಿಷ್ಯ ಸಾಂಪ್ರದಾಯವಿಲ್ಲದೆ ಒಬ್ಬಾನೊಬ್ಬ ಬಿಡಾಡಿ ಜಂಗಮನು ನಮ್ಮ ಬಳ್ಳಾವಿಗೆ ಬಂದು ಮಠದವನೆಂದು ಹೇಳಿಕೊಳ್ಳುತ್ತ ಶುದ್ಧ ಸಾಂಪ್ರದಾಯದ ಮಠದವರನ್ನೆಲ್ಲಾ ಕೆಡಿಸಹತ್ತಿರುವನು. ವೈದಿಕ ಮಾರ್ಗವನ್ನು ತಿರಸ್ಕರಿಸುತ್ತಿರುವನು. ಶಿಖಾಧಾರಿಗಳನ್ನು ಕಂಡರಂತೂ ಇವನು ಹೆಂಡ ಕುಡಿದ ಚಂಡಾಲನಂತೆ ಉನ್ಮತ್ತನಾಗಿ ಅಮಂಗಲ ಮಾತುಗಳನ್ನಾಡತೊಡಗುವನು. ಇದು ಶೂದ್ರ ಬೀಜದ ಪ್ರಭಾವವಾಗಿದೆ. ಯಥಾಬೀಜಸ್ತಥಾಂಕುರ: ಎಂಬ ನೀತಿಯಂತೆ ಇವನು ವರ್ತಿಸುತ್ತಿರುವನು. ಹೀಗೆ ವರ್ತಿಸುವದೇ ಇವನಿಗೆ ಭೂಷಣವಾಗಿದೆ. ಆದರೆ ಶುದ್ಧ ಸಂಪ್ರದಾಯದ ಮಠದವರು ಈ ರಂಡಾಪುತ್ರನ ಸಹವಾಸದಲ್ಲಿ ಬಿದ್ದು ಕೆಡದೆ ತಮ್ಮ ಧರ್ಮವನ್ನು ಕಾಯ್ದುಕೊಳ್ಳಬೇಕೆಂದು ಇಚ್ಛಿಸುತ್ತೇನೆ.

- ಓರ್ವ ಸ್ಥಳೀಕ

ಗುಪ್ತನಾಮದಿಂದ ಬರೆದ ಈ ಪತ್ರ ಬಹಿರಂಗ ಪಡಿಸುವ ಸತ್ಯವೆಂದರೆ ಗುರುವರ್ಗದ (ಶುದ್ಧ ಸಾಂಪ್ರದಾಯದ) ಮಠಗಳವರ ಆಚರಣೆ, ಇವರು ವೈದಿಕ ಮಾರ್ಗ ಅನುಸರಿಸುವರೆಂಬುದು, ಇವರು ಜುಟ್ಟು (ಶಿಖಾಧಾರಣೆ) ಬಿಡುವರೆಂಬುದು ಇದನ್ನು ಆ ಜಂಗಮನು ಖಂಡಿಸುತ್ತಿರುವನು ಎಂಬುದನ್ನು. ಅದಕ್ಕಾಗಿ ಕಾಶೀನಾಥ ಶಾಸ್ತ್ರಿಗಳು ಆ ಜಂಗಮನನ್ನು ಶೂದ್ರ ಬೀಜದವನಿರಬೇಕೆಂದು ವ್ಯಂಗ್ಯವಾಡಿರುವುದಲ್ಲದೆ, ಗುರು ವರ್ಗದ ಶುದ್ಧ ಸಾಂಪ್ರದಾಯದವರು, ತಮ್ಮ (ಜಾತಿ ವಾದ) ತತ್ವ ಬಿಡದೆ ಕಾಯ್ದುಕೊಳ್ಳಬೇಕೆಂದು ಎಚ್ಚರಿಕೆ ಸಹ ನೀಡಿರುವರು.

ಬಸವ ತತ್ವವನ್ನು ಪ್ರತಿಪಾದಿಸುವವರನ್ನು ವೇಶ್ಯಾಪುತ್ರರು ಎನ್ನುವ ಮಟ್ಟಕ್ಕೂ ಹೋಗಿರುವ ಕಾಶೀನಾಥ ಶಾಸ್ತ್ರಿಗಳು (ದೈವಜ್ಞ ವಿನೋದ ಎಂಬ ಹೆಸರಿನಲ್ಲಿ) ಬಳಸಿರುವ ಭಾಷೆ ನೋಡಿರಿ.

ಇದೇ ದೈವಜ್ಞ ವಿನೋದ ಎಂಬ ಪ್ರಚ್ಛನ್ನನಾಮದಿಂದ ಕಾಶೀನಾಥ ಶಾಸ್ತ್ರಿ ಬರೆದ ಮತ್ತೊಂದು ಪತ್ರ ನೋಡಿರಿ.

ವೀರಶೈವ ಮತವು ರಾಜಕೀಯ ತೊತ್ತಿನ ಕೂಸಲ್ಲ.

ಬಸವನು ಮತೋದ್ಧಾರ ಮಾಡಿದನೆಂದೂ, ಕನ್ನಡವಾಙ್ಮಯವನ್ನು ಬೆಳಕಿಗೆ ತಂದನೆಂದೂ, ಕನ್ನಡ ವಚನಶಾಸ್ತ್ರವು ಇವನಿಂದಲೇ ಆಯಿತೆಂದೂ, ಅನ್ನುವುದು ಅಸತ್ಯವಾದುದು. ವಚನ ಪ್ರಚಾರವು ವಿಜಯನಗರದ ರಾಜ್ಯಾರಂಭದಿಂದ ಆಯಿತು. ಕೆಲ ಜನ ಪಂಡಿತರು ಈ ಕನ್ನಡ ವಚನಗಳಿಗೆ ತಮ್ಮ ಮುದ್ರಿಕೆಯನ್ನಿಡದೆ, ಬಸವ - ಚನ್ನಬಸವ- ನಾಗವ್ವ - ನೀಲವ್ವ ಮೊದಲಾದ ಅಕ್ಷರ ಶೂನ್ಯರ ಮುದ್ರಿಕೆಯನ್ನೊತ್ತಿ ಪ್ರಚಾರ ಮಾಡಿದರು.......

(ಲೇಖಕ- ದೈವಜ್ಞ ವಿನೋದ, ಶಿರೋಳ)

ವಚನ ಸಾಹಿತ್ಯ ಬಸವಾದಿ ಪ್ರಮಥರಿಂದ ಆಗಲಿಲ್ಲವಂತೆ. ಇದು ವಿಜಯದ ನಗರದ ರಾಜ್ಯಾರಂಭದಿಂದ ಆಯಿತಂತೆ. ಕೆಲವು ಪಂಡಿತರು ವಚನಗಳನ್ನು ಬರೆದು ತಮ್ಮ ಮುದ್ರಿಕೆಯನ್ನಿಡದೆ ಬಸವ -ಚನ್ನಬಸವ-ನಾಗವ್ವ-ನೀಲವ್ವ ಮೊದಲಾದ ಅಕ್ಷರ ಶೂನ್ಯರ ಮುದ್ರಿಕೆಯನೊತ್ತಿ ಪ್ರಚಾರ ಮಾಡಿದರಂತೆ! ಕಾಶೀನಾಥ ಶಾಸ್ತ್ರಿ ಎಂತಹ ವಿಷಜಂತು ಎಂಬುದು ಈ ಬರಹದಿಂದ ಬಯಲಾಗುವುದು.

ಕೆಲವು ವಿರಕ್ತರು ಉದಾ: ಮುಂಡರಗಿ ಶ್ರೀಗಳು, ಮೂರು ಸಾವಿರ ಮಠದವರು ವೀರಶೈವದ ಮೋಹಿಗಳಾಗಿರುವರು. ಅವರನ್ನು ಒಂದು ಕಾಲದಲ್ಲಿ ಕಾಶೀನಾಥ ಶಾಸ್ತ್ರಗಳು ಎಷ್ಟು ನಿಂದಿಸಿದ್ದಾರೆಂಬುದನ್ನು ಕಾಣಬಹುದು.

ನನ್ನ ಪ್ರವಾಸದಲ್ಲಿ ವಿರಕ್ತರ ಬಗ್ಗೆ ನಡೆದ ಕೆಲವು ಪ್ರಶ್ನೋತ್ತರಗಳು

"......... ಮೂಕನ ಎದುರಿಗೆ ಮೂಗು ತುರಿಸಿಕೊಂಡರೆ ಸಿಟ್ಟಿಗೆ ಬರುವಂತೆ ಗುರುವರ್ಗದ ಉದ್ಧಾರಕ್ಕಾಗಿ ಅಹೋರಾತ್ರಿ ಶ್ರಮಪಡುತ್ತಿರುವ ಲೋಕಮಾನ್ಯರಾದ ಪಂಡಿತ ಶ್ರೀ ಕಾಶೀನಾಥ ಶಾಸ್ತ್ರಿಗಳ ಹೆಸರನ್ನು ಕೇಳಿ ವಿರಕ್ತರೂ ಅವರ ಅನುಯಾಯಿಗಳೂ ಸಹ ರೇಗಬಹುದು... ಆ ಪುಣ್ಯಾತ್ಮನ ಅವತಾರವಾಗದಿದ್ದರೆ ಇಷ್ಟರಲ್ಲಿ ಗುರುವರ್ಗವು ನಾಮಾವಶೇಷವಾಗುತ್ತಿತ್ತೆಂದು ಹೇಳುವಲ್ಲಿ ಯಾವ ಅಭ್ಯಂತರವೂ ಇಲ್ಲ. ಆ ಮಹನೀಯನು ವಯಸ್ಸಿನಿಂದ ಚಿಕ್ಕವನಾಗಿದ್ದರೂ ಆಚಾರ್ಯರ ಕೃಪೆಯಿಂದ ಅಘಟಿತಘಟನ ಕರ್ತೃಶ್ವಶಾಲಿಯಾಗಿ ದುರ್ವಿರಕ್ತರ ಉಪಟಳವನ್ನು ಅತ್ಯಲ್ಪ ಕಾಲದಲ್ಲಿಯೇ ಬಗ್ಗುಬಡಿದನು. ಗುರು ವರ್ಗದ ಉದ್ಧಾರಕ್ಕಾಗಿ ಸದುಪದೇಶ ಮಾಡುವ ಪ್ರಭಾ ಪತ್ರಿಕೆಯನ್ನು ಜಗತ್ತಿನಲ್ಲಿ ಪ್ರಕಾಶಗೊಳಿಸಿದನು. ಭೀಷ್ಮ ಬ್ರಹ್ಮಚಾರಿಯಾದ ಆ ಪಂಡಿತನ ನಾಮಸ್ಮರಣೆಯನ್ನು ಮಾಡುವುದರ ಬದಲು ನಿಂದಿಸಿದರೆ ಸೂರ್ಯನ ಮೇಲೆ ಮಣ್ಣು ತೂರಿ ತಮ್ಮ ಕಣ್ಣಿನಲ್ಲಿ ಹಾಕಿಕೊಂಡಂತೆಯೇ ಸರಿ!........"

ಎಚ್.ಎಸ್.ಆರಾಧ್ಯಮಠ, ಬೇವಿನಹಳ್ಳಿ

ನಾವು ಹುಡುಕುತ್ತಿದ್ದ ಕಳ್ಳ ಸಿಕ್ಕ. ಪಂಚಾಚಾರ್ಯ ಪ್ರಭಾದ ಸಂಪುಟ 1 ಸಂಚಿಕೆ 25, ಪುಟ 3ರಲ್ಲಿ ದಿ.3-10-1927ರ ಸಂಚಿಕೆಯಲ್ಲಿ ಈ ಪ್ರಶಂಸಾಪತ್ರ ಮುದ್ರಣಗೊಂಡಿದೆ. ಅಂದರೆ ಲಿಂಗಾಯತ ಧರ್ಮ - ಸಮಾಜಗಳು ವೈದಿಕೀಕರಣಗೊಂಡಿದ್ದು 20ನೆಯ ಶತಮಾನದ 2,

3ನೆಯ ದಶಕದಲ್ಲಿ ಎಂಬುದಕ್ಕೆ ಈ ಪತ್ರವು ದಾಖಲೆ ನೀಡುತ್ತದೆ.

ಗುಂಡ ಶಾಸ್ತ್ರಿಗಳು ಈ ಪತ್ರಕ್ಕೆ ಟಿಪ್ಪಣಿ ಬರೆದು ಹೇಳುತ್ತಾರೆ, "ಶಾಂತವಾಗಿದ್ದ ವೀರಶೈವ ಸಮಾಜದ ಸಾಗರದಲ್ಲಿ ಬಸವಾದಿ ಪ್ರಮಥರ ನಿಂದೆ ಎಂಬ ಭಯಂಕರವಾದ ಬಿರುಗಳಿಯನ್ನೆಬ್ಬಿಸಿ, ತಮ್ಮ ಸ್ವಾರ್ಥವನ್ನು ಈ ಶಾಸ್ತ್ರಿಗಳು ಸಾಧಿಸಿಕೊಳ್ಳುತ್ತಿರುವರು." ಎಂಬುದಾಗಿ. ವೀರಶೈವ ಶೂದ್ರರೇ ಇತ್ತ ಲಕ್ಷ್ಯಕೊಡಿರಿ ಎಂಬ ಶೀರ್ಷಿಕೆಯಡಿಯಲ್ಲಿ ಎಸ್.ಬಸಪ್ಪ, ಗುಡ್ಡದಹಳ್ಳಿ ಎಂಬ ಗುಪ್ತನಾಮದಿಂದ ಶಾಸ್ತ್ರಿಗಳು ಸ್ವಪ್ರಶಂಸೆ ಹೀಗೆ ಮಾಡಿಕೊಂಡಿದ್ದಾರೆ.

ವೀರಶೈವ ಶೂದ್ರರೇ ಇತ್ತ ಲಕ್ಷ್ಯ ಕೊಡಿರಿ

"ಲೋಕಮಾನ್ಯ ಪಂಡಿತ ವೇ|| ಕಾಶೀನಾಥ ಶಾಸ್ತ್ರಿಗಳವರು ಪಂಚಾಚಾರ್ಯ ಪ್ರಭಾ ಪತ್ರಿಕಾ ಮೂಲಕವಾಗಿ ವೀರಶೈವ ಮತ ಧರ್ಮತತ್ವಗಳನ್ನು ಪ್ರಪಂಚದಲ್ಲೆಲ್ಲಾ ಪ್ರಕಾಶಿಸುವಂತೆ ಮಾಡಿ ಮತೋದ್ಧಾರ ಮಾಡುತ್ತಿರುವುದು ಸರ್ವಜನ ವಿದಿತವಾಗಿದೆ....."

-ಎಸ್.ಬಸಪ್ಪ, ಗುಡ್ಡದಹಳ್ಳಿ

ಲಿಂಗಾಯತ ಸಮಾಜದಲ್ಲಿ ಆರಾಧ್ಯರನ್ನು, ಜಂಗಮರನ್ನು ವೀರಶೈವ ಬ್ರಾಹ್ಮಣರೆಂದು ಮತ್ತೆ ಕೆಲವರನ್ನು ವೀರಶೈವ ಶೂದ್ರರೆಂದು ವರ್ಗೀಕರಿಸುವ ಅನಿಷ್ಠ ಪದ್ಧತಿಯನ್ನು ಜಾರಿಗೆ ತಂದವರು ಇದೇ ಕಾಶೀನಾಥರು ಮತ್ತು ಅವರ ಬೋಧೆಯನ್ನು ಅನುಸರಿಸಿದ ಪಂಚಪೀಠ ಮಠದವರು.

ಭದ್ರಾವತಿಯಲ್ಲಿ ಮುರಿಗೆಪ್ಪಜ್ಜ ಎಂಬ ಶರಣರಿದ್ದರು. ಬಹಳ ತತ್ವ ನಿಷ್ಠರು. ಪೂಜ್ಯ ಶ್ರೀ ಲಿಂಗಾನಂದ ಅಪ್ಪಾಜಿಯವರ ಪ್ರವಚನವಾದಾಗ ತಪ್ಪದೆ ಬರುತ್ತಿದ್ದರು. ಅವರೊಂದು ಅನುಭವ ಹೇಳಿದ್ದು ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. 1930ರ ದಶಕ. ಗುರು -ವಿರಕ್ತರ ಮಧ್ಯೆ ಸಂಘರ್ಷ ನಡೆಯುತ್ತಿದ್ದ ಕಾಲ. ರಂಭಾಪುರಿ ಮಠದಿಂದ (ಬಹುಶಃ ಕಾಶೀನಾಥ ಶಾಸ್ತ್ರಿಗಳ ದುರ್ಬೋಧೆಯ ಫಲವಾಗಿ ಇರಬಹುದು) ಒಂದು ಪುಸ್ತಕ ಹೊರಟಿತು. ಅದರಲ್ಲಿ ಲಿಂಗಾಯತ ಸಮಾಜದ ಒಳಗಿನ ಎಲ್ಲ ಒಳಪಂಗಡಗಳವರನ್ನು ಚತುರ್ವರ್ಣಗಳಿಗೆ ಅನುಸಾರವಾಗಿ ವರ್ಗೀಕರಿಸಲಾಗಿತ್ತು. ಗುರು ಬಸವಣ್ಣನವರ ತತ್ವದ ಪ್ರಕಾರ ದೀಕ್ಷೆ ಹೊಂದಿದವರೆಲ್ಲ ಸಮಾನರು; ಭೇದ ಮಾಡಬಾರದು. ಈ ಪುಸ್ತಕ ಸಮಾಜದಲ್ಲಿ ಅಲ್ಲೋಲಕಲ್ಲೋಲವನ್ನು ಉಂಟು ಮಾಡಿತು. ಭದ್ರಾವತಿಯಿಂದ ಒಂದು ಬಸ್ ಜನ ಲಿಂಗಾಯತ ಪ್ರಮುಖರು ಮುರಿಗೆಪ್ಪನವರ ನೇತೃತ್ವದಲ್ಲಿ ಬಾಳೇಹೊನ್ನೂರು ಮಠಕ್ಕೆ ಹೋದರು.

"ಬುದ್ಧಿ, ಬ್ರಾಹ್ಮಣರು ಶೂದ್ರರ ಮನೆಯಲ್ಲಿ ಉಣ್ಣುವರೆ ?" ಪ್ರಶ್ನಿಸಿದರು

"ಇಲ್ಲ."

"ಉಂಡರೆ"

"ಅವನು ಭ್ರಷ್ಟನಾಗುವನು."

"ಪರಿಹಾರವೇನು?"

"ನಾಲಿಗೆ ಸುಟ್ಟು ಶುದ್ಧೀಕರಿಸಬೇಕು." ಸ್ವಾಮಿಗಳ ಉತ್ತರ

"ಹಾಗಾದರೆ, ನೀವು ಬರೆಸಿರುವ ಪುಸ್ತಕದಲ್ಲಿ ನೀವು ವೀರಶೈವ ಬ್ರಾಹ್ಮಣರು, ನಾವು ವೀರಶೈವ ಶೂದ್ರರು. ಎಷ್ಟೋ ಬಾರಿ ನಮ್ಮಲ್ಲಿಗೆ ಬಂದು ಬಿನ್ನಹ ಸ್ವೀಕರಿಸಿದ್ದೀರಿ. ಆದ್ದರಿಂದ ಈಗ ನಿಮ್ಮ ನಾಲಿಗೆ ಸುಡಬೇಕು."

ಸ್ವಾಮಿಗಳು ಪೆಚ್ಚಾಗಿ ಕುಳಿತರಂತೆ.

ರೇಣುಕಾಚಾರ್ಯರ ಜನ್ಮದಾತ ಶಾಸ್ತ್ರಿಗಳು

ಶಾಸ್ತ್ರಿಗಳು ವೀರಶೈವ ಮತೋದ್ಧಾರ ಎಂಬ ನೆಪದಿಂದ ಹಲವಾರು ಪುಸ್ತಕಗಳನ್ನು ಕಾಶೀನಾಥ ಗ್ರಂಥ ಮಾಲೆ ಮೂಲಕ ಪ್ರಕಟಪಡಿಸಿದ್ದಾರೆ. 1926ರಲ್ಲಿ ಸಿದ್ಧನಾಥ ಶಿವಾಚಾರ್ಯ ವಿರಚಿತ ರೇಣುಕ ವಿಜಯ ಎಂಬ ಕೃತ್ರಿಮ ನಾಮದಿಂದ ಒಂದು ಸಂಸ್ಕೃತ ಚಂಪೂ ಗ್ರಂಥವನ್ನು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಮುದ್ರಿಸಿದರು. ಬಾಳೇ ಹೊನ್ನೂರು ಮಠದ ಹರೀಶ್ವರ ಶಾಸ್ತ್ರಿಗಳು ಇದರ ಪ್ರಕಾಶಕರು. ಇದೇ ಕಾಲ್ಪನಿಕ ರೇಣುಕಾಚಾರ್ಯರಿಗೆ ಜನ್ಮಕೊಟ್ಟ ಪುಸ್ತಕ. ಆನಂತರ 1928ರಲ್ಲಿ ಮೈಸೂರು ಆಸ್ಥಾನ ವಿದ್ವಾನ್ ಸಿರಸಿ ಗುರು ಶಾಂತ ಶಾಸ್ತ್ರಿಗಳು ಅದನ್ನು ಕನ್ನಡ ಗದ್ಯರೂಪವಾಗಿ ಬರೆದರು. ಅದು ಕಾಶೀನಾಥ ಗ್ರಂಥಮಾಲೆಯ 2ನೆಯ ಪುಷ್ಪವಾಗಿ ಪ್ರಕಟವಾಯಿತು. ಅನಂತರ ಮೈಸೂರು ಆಸ್ಥಾನ ವಿದ್ವಾನ್ ನಂಜನಗೂಡು ಶ್ರೀಕಂಠ ಶಾಸ್ತ್ರಿಗಳು ರೇಣುಕ ವಿಜಯ ಪುರಾಣ ಎಂಬ ಪದ್ಯ ಗ್ರಂಥ ರಚಿಸಿದ್ದು 1932ರಲ್ಲಿ ಅದು ಕಾಶೀನಾಥ ಗ್ರಂಥ ಮಾಲೆಯ 18ನೆಯ ಕೃತಿಯಾಗಿ ಪ್ರಕಟವಾಯಿತು.

ಈ ಪುಸ್ತಕ 975 ವರ್ಷಗಳ ಹಿಂದೆ ಸಿದ್ಧನಾಥ ಶಿವಾಚಾರ್ಯ ಎಂಬುವವರಿಂದ ರಚಿಸಲ್ಪಟ್ಟಿರುತ್ತೆಂದು ಹೇಳಿ ರೇಣುಕಾಚಾರ್ಯರು ಅಗಸ್ತ್ಯರಿಗೆ ಶಿವತತ್ತ್ವೋಪದೇಶ ಮಾಡಿದ್ದು, ವಿಭೀಷಣನ ಮೂಲಕ 3 ಕೋಟಿ ಲಿಂಗಗಳ ಸ್ಥಾಪನೆ ಮಾಡಿದ್ದು ವಿಕ್ರಮಾದಿತ್ಯನಿಗೆ ಖಡ್ಗವನ್ನು ಕೊಟ್ಟುದು, ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗ ಕೊಡಲಾಯಿತು ಎಂಬ ಬಗ್ಗೆ ಬರೆಯಲಾಗಿದೆ.

ಮೈಸೂರು ಸಂಸ್ಥಾನದ ಆಸ್ಥಾನ ವಿದ್ವಾಂಸರಾದ ಯಳಂದೂರು ಶ್ರೀಕಂಠಶಾಸ್ತ್ರಗಳೆಂಬುವರ ಪತ್ನಿ ಕೋನಮ್ಮ ಎನ್ನುವವರು 1931-32ರಲ್ಲಿ ಮೈಸೂರು ಕೋರ್ಟಿನಲ್ಲಿ ಒಂದು ದಾವೆ ಹೂಡಿದರು. ತಮ್ಮ ಯಜಮಾನರು ಬರೆದ ಒಂದು ಚಂಪೂ ಪ್ರಬಂಧದ ಕೈಬರವಣಿಗೆಯ ಪ್ರತಿಯನ್ನು ನೋಡಲೆಂದು ತೆಗೆದುಕೊಂಡು ಹೋಗಿ ಅದರಲ್ಲಿ ಕೆಲವು ವ್ಯತ್ಯಾಸಗಳನ್ನು ಮಾಡಿ 1926ನೇ ಇಸವಿಯಲ್ಲಿ ಹರೀಶ್ವರ ಶಾಸ್ತ್ರಿಗಳ ಹೆಸರಿನಲ್ಲಿ ಕಾಶೀನಾಥ ಶಾಸ್ತ್ರಿಗಳು ಪ್ರಕಟಿಸಿರುವರು, ಅದೇ ಗ್ರಂಥವನ್ನು ಕನ್ನಡದಲ್ಲಿ ಗುರುಶಾಂತ ಶಾಸ್ತ್ರಿಗಳು ಬರೆದಿರುವರೆಂದು -ಕಾಶೀನಾಥ ಶಾಸ್ತ್ರಿ ಹರೀಶ್ವರ ಮತ್ತು ಗುರುಶಾಂತ ಶಾಸ್ತ್ರಿಗಳ ಮೇಲೆ ಕೋನಮ್ಮ ದಾವೆ ಹೂಡಿದರು. ಇದರರ್ಥ ಕಾಶೀನಾಥ ಶಾಸ್ತ್ರಿಗಳದು ಕೃತಿಚೌರ್ಯವೆಂದು ಅರ್ಥವಾಗುವುದಲ್ಲದೆ, ಕಾಲ್ಪನಿಕ ರೇಣುಕಾಚಾರ್ಯರ ಜನ್ಮದಾತರು ಶ್ರೀಕಂಠಶಾಸ್ತ್ರಿ ಕಾಶೀನಾಥ ಶಾಸ್ತ್ರಿ ಮತ್ತು ಗುರುಶಾಂತ ಶಾಸ್ತ್ರಿ ಎಂಬುದು ದೃಢವಾಗುವುದು. ಕಾಶೀನಾಥ ಶಾಸ್ತ್ರಿಗಳ ಇಂಥ ದುರ್ವೃತ್ತಿಯಿಂದಾಗಿ ಮೈಸೂರಿನ ವೀರಶೈವರಿಗಂತೂ ಅವರ ಮೇಲೆ ಎಳ್ಳಷ್ಟೂ ಗೌರವವಿಲ್ಲ ಎಂದು ಗುಂಡಶಾಸ್ತ್ರಿಗಳು ಬರೆಯುತ್ತಾರೆ. (ಪುಟ 19) ಮತ್ತು ಶಾಸ್ತ್ರಿಗಳನ್ನು ವಿರೋಧಿಸುತ್ತಿದ್ದವರು ನಗರದ ಪ್ರಮುಖರು, ಗೌರವಸ್ಥರು, ಸದಾಚಾರ ಸಂಪನ್ನರು, ಪ್ರಮುಖ ವ್ಯಾಪಾರಸ್ಥರು ಎಂದೂ ಬರೆಯುತ್ತಾರೆ.

ಕಾಲ್ಪನಿಕ ರೇಣುಕಾಚಾರ್ಯರ ಅವತಾರಕ್ಕೆ ಶಿವನ ಶಾಪವೇ ಕಾರಣವೆಂದು. ಗ್ರಂಥ ಕೃರ್ತಗಳಾದ ಶ್ರೀಕಂಠಶಾಸ್ತ್ರಿಗಳು ಬರೆದರೆ ಭೂಮಿಯಲ್ಲಿ ಶಿಥಿಲಗೊಂಡ ವೀರಶೈವ ಮತವನ್ನು ಉದ್ಧರಿಸಲು ಅವತರಿಸಿದರೆಂದು ಹರೀಶ್ವರ ಶಾಸ್ತ್ರಿಗಳ ಹೆಸರಿನಲ್ಲಿ ಕಾಶೀನಾಥ ಶಾಸ್ತ್ರಿಗಳು ಬರೆಯುತ್ತಾರೆ. ಸೂಕ್ಷ್ಮವಾಗಿ ಅವಲೋಕಿಸಿದರೆ ಕಾಶೀನಾಥ ಶಾಸ್ತ್ರಿಗಳು ರೇಣುಕಾಚಾರ್ಯರು

ವೀರಶೈವ ಮತೋದ್ಧಾರಕ್ಕೆ ಬಂದರೆಂದು ಹೇಳಿದ್ದಾರಲ್ಲದೆ ಸಂಸ್ಥಾಪನೆಗಲ್ಲ. ಅಂದರೆ ವೀರಶೈವ ಮತ ಆಗಲೇ ಇತ್ತೆಂದು ಅದು ಶಿಥಿಲವಾಗಿತ್ತೆಂದು ಅರ್ಥವಾಗುವುದಲ್ಲವೆ?

ರೇವಣ ಸಿದ್ಧ ಮತ್ತು ರೇಣುಕಾಚಾರ್ಯ

ಸುಳ್ಳಿನ ಅಡಿಪಾಯದ ಮೇಲೆ ಪಂಚಾಚಾರ್ಯರ ಕಲ್ಪನೆಯ ಮರಳಿನ ಮಂದಿರವನ್ನು ಕಟ್ಟಿದ ಶಾಸ್ತ್ರಿಗಳು ಸುಳ್ಳಿಗೆ ಜೀವಕೊಡಲು ಬಳಸಿಕೊಂಡುದು ರೇವಣಸಿದ್ಧರೆಂಬ ಐತಿಹಾಸಿಕ ವ್ಯಕ್ತಿಯನ್ನು. ರೇವಣಸಿದ್ಧರು ಗುರು ಬಸವಣ್ಣನವರ ಸಮಕಾಲೀನರು. ಅವರ ಮಗ ರುದ್ರಮುನಿ ಚನ್ನಬಸವಣ್ಣನವರ ವಯಸ್ಸಿನವರು. ಹುಟ್ಟಿನಿಂದ ಹಾಲುಮತ(ಕುರುಬ)ದವರಾದ 'ರೇವಣ' ರು ಲಕುಲೀಶ ಶೈವ ಮಾರ್ಗಾನುಯಾಯಿಗಳಾಗಿದ್ದರು. ಹರಿಹರ ಮಹಾಕವಿ ತನ್ನ ರೇವಣಸಿದ್ಧ ರಗಳೆ ಎಂಬ ಗ್ರಂಥದಲ್ಲಿ ಲಾಕುಳದ ಲಾಕ್ಷಣಿಕ ನಮ್ಮಮ್ಮ ಬರುತಿರ್ದ ಎಂದು ಬಣ್ಣಿಸಿದ್ದಾನೆ. ಹರಿಹರನ ರಗಳೆಯಲ್ಲಿ ಎಲ್ಲೆಲ್ಲಿಯೂ ಲಿಂಗಧಾರಣೆಯ ವಿಷಯ ಬಂದಿಲ್ಲ, ವೀರಶೈವ, ಷಟಸ್ಥಲ ಮುಂತಾದ ಪ್ರಯೋಗವಿಲ್ಲ. ಹೀಗಾಗಿ ರೇವಣಸಿದ್ಧರು ಮೊದಲು ಲಾಕುಲೀಶ ಶೈವರಾಗಿದ್ದರು. ಆನಂತರ ಲಿಂಗಧಾರಣೆ ಮಾಡಿಕೊಂಡು ಲಿಂಗಾಯತರಾಗಿದ್ದಾರೆ. ಗುಂಡಶಾಸ್ತ್ರಿಗಳ ಒಂದು ಅಭಿಪ್ರಾಯ ಬಹಳ ಮಹತ್ವಪೂರ್ಣ. "ಅಷ್ಟಾವರಣ, ಪಂಚಾಚಾರ, ಷಟಸ್ಥಲ ಎಂಬ ತತ್ವ ಪ್ರತಿಪಾದಕ ಶಬ್ದಗಳು ಬಸವೇಶ್ವರನಿಗಿಂತಲೂ ಪೂರ್ವದಲ್ಲಿ ರಚಿಸಲ್ಪಟ್ಟ ಯಾವ ಗ್ರಂಥದಲ್ಲಿಯೂ ಕಂಡು ಬರುವುದಿಲ್ಲ........ ಬಸವೇಶ್ವರನ ಕಾಲದಲ್ಲಿ ಕಾಳಾಮುಖ ಮತ್ತು ಇತರ ಶೈವ ಗುರುಗಳನೇಕರು ಲಿಂಗಾಯತ (ವೀರಶೈವರ)ರಾಗಿದ್ದರು. ಲಿಂಗಾಯತ (ವೀರಶೈವ) ಮಠಗಳಾದರೂ ಬಸವೇಶ್ವರನ ನಂತರವೇ ಸ್ಥಾಪಿತವಾದವು."

ಗುಂಡಶಾಸ್ತ್ರಿ, ಪುಟ.31, ಕಾ.ನಿ.ಜಿ.ಚ

ರೇಣುಕಾಚಾರ್ಯರು ಆಂಧ್ರದ ಕೊಲ್ಲಿಪಾಕಿಯ ಶ್ರೀ ಸೋಮೇಶ್ವರ ಲಿಂಗದಿಂದ ಉದ್ಭವಿಸಿದ ರೆಂಬ ಕಥೆಯನ್ನು ಕಾಶಿನಾಥ ಶಾಸ್ತ್ರಿ ಹರೀಶ್ವರ ಶಾಸ್ತ್ರಿ ಗುರು ಶಾಂತಶಾಸ್ತ್ರಿ ಎಂಬ ಮೂವರು ಸೃಷ್ಟಿಸಿದರು. ಹೀಗಾಗಿ ಜನನ, ಇತಿಹಾಸ ಏನೂ ಇಲ್ಲದ ರೇಣುಕಾಚಾರ್ಯರು ಹುಟ್ಟಿದರು. ಡಾ|| ನಂದಿಮಠರು 1929ನೆಯ ಇಸವಿಯ ಮೇ ತಿಂಗಳಿನ ಫ.ಗು.ಹಳಕಟ್ಟಿ ಸಂಪಾದಿತ ಶಿವಾನುಭವ ಪತ್ರಿಕೆಯಲ್ಲಿ ನಿಜಾಮ ಸಂಸ್ಥಾನಕ್ಕೆ ಸೇರಿದ ಶಿರಿವಾಳದ ಸಿದ್ಧಲಿಂಗೇಶ್ವರ ದೇವಸ್ಥಾನ ದಲ್ಲಿ ದೊರೆತ ಒಂದು ಶಿಲಾಶಾಸನ ಪ್ರಕಟಿಸಿದ್ದಾರೆ. ಅದರಲ್ಲಿ ಶ್ರೀಮದ್ಯಣಿಮಾದ್ಯಷ್ಟ ಗುಣ ಸಂಪನ್ನರೂ ಷಟ್‌ಕ್ರಿಯಾನಿರತರುಂ ಸಾರ ಸೌರಭ್ಯ ಸರ್ವ ನಿಸ್ಸಂಗರುಮಪ್ಪ "ಶಿವಯೋಗಿ ಶಾಂತಿಮೈಯ್ಯಗಳ ಪುತ್ರ ರೇಣುಕಾಚಾರ್ಯರ ಪ್ರಸಿದ್ಧಿ ಯೆಂತೆಂದಡೆ." (ಪುಟ 31)

ಕಾಲಜ್ಞಾನ ವಚನಗಳಲ್ಲಿ ಸಹ ಸಿದ್ಧ(ಶೈವ) ಮಾರ್ಗಾನುಯಾಯಿಗಳಾದ ರೇವಣರು ಶಾಂತಿಮಯ್ಯಗಳ ಕೈಯಿಂದ ಲಿಂಗದೀಕ್ಷೆ ಪಡೆದುದು ಉಲ್ಲೇಖವಾಗಿದೆ. ಶಿವಯೋಗಿ ಶಾಂತಿಮಯ್ಯಗಳು ವಿರಕ್ತರು, ಅವರಿಗೆ ಚಿನ್ಮಯ ಜ್ಞಾನಿ ಚನ್ನಬಸವಣ್ಣನವರಿಂದ ದೀಕ್ಷೆಯಾಗಿದೆ.. ಶ್ರೀರೇವಣಸಿದ್ಧರು ಸಿದ್ಧರಾಮೇಶ್ವರರ ತಾಯಿಯು ಗರ್ಭವತಿಇದ್ದಾಗ, ಮುದ್ದೇಗೌಡನಮನೆಗೆ ಬಂದುಸುಗ್ಗವ್ವೆಗೆತಲೆಬಾಗಿನಮಸ್ಕರಿಸುವ ಪ್ರಸಂಗವು ಬೊಮ್ಮರಸನಕಾವ್ಯದಲ್ಲಿ ಪ್ರಸ್ತಾಪವಾಗಿದೆ. ಈ ಐತಿಹಾಸಿಕ ಸಂಗತಿಯನ್ನು ಕಾಶೀನಾಥ ಶಾಸ್ತ್ರಿಗಳು ಸುಳ್ಳೆಂದು ಪ್ರತಿಪಾದಿಸುತ್ತಾರೆ.

ಅಗಸ್ತ್ಯರಿಗೆ ವೀರಶೈವ ತತ್ತ್ವೋಪದೇಶವನ್ನು ರೇಣುಕಾಚಾರ್ಯರು ಮಾಡಿದರು.

ವಿಭೀಷಣನಿಂದ 3 ಕೋಟಿ ಲಿಂಗಗಳನ್ನು ಸ್ಥಾಪಿಸಿದರು, ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಸ್ಥಾವರ ಲಿಂಗವನ್ನು ಕೊಟ್ಟರು ಎಂದೆಲ್ಲ ಕಾಲ್ಪನಿಕ ಕಥೆಗಳನ್ನು ಶಾಸ್ತ್ರಿಗಳು ಸೃಷ್ಟಿಸಿದರು. ಇವರಿಗೆ ಶತಮಾನಗಳ ಲೆಕ್ಕಾಚಾರವೇ ತಿಳಿದಂತೆ ಕಾಣದು. ಅಗಸ್ತ್ಯರು ಪುರಾಣ ಪುರುಷ, ವಿಭೂಷಣ ಯಾವ ಕಾಲದವನು? ಶಂಕರಾಚಾರ್ಯರು 8ನೆಯ ಶತಮಾನದವರು. 12ನೆಯ ಶತಮಾನ ದವರು ರೇವಣಸಿದ್ಧರು. ಹಾಗೆಂದ ತಕ್ಷಣ ರೇಣುಕಾಚಾರ್ಯರು ನಾಲ್ಕುಯುಗಗಳಲ್ಲಿ ಅವತರಿಸಿ ಈ ಮೇಲ್ಕಂಡ ಕಾರ್ಯ ಮಾಡಿದರು ಎನ್ನಲಾಗುವುದು. ವಿಭೀಷಣನಿಗೆ ಹೇಳಿ 3 ಕೋಟಿ ಲಿಂಗ ಸ್ಥಾಪನೆ ಮಾಡಿದ್ದರೆ ಅವು ಶ್ರೀಲಂಕಾದಲ್ಲಿ ಇರಬೇಕಾಗಿತ್ತಲ್ಲವೆ? ಲಿಂಗಾಯತ ಗುರುವು ಕೊಡಬೇಕಾದುದು ಇಷ್ಟಲಿಂಗವನ್ನು ಸ್ಥಾವರಲಿಂಗವನ್ನಲ್ಲ. 3 ಕೋಟಿ ಲಿಂಗಸ್ಥಾಪನೆ ಮಾಡಿಸಿದರೆ ಆ ಗುರು ಲಿಂಗಾಯತ ಗುರುವೇ ಅಲ್ಲ. ಅಂದಾಗ ಈ ಧರ್ಮಕ್ಕೆ ಅವರು ಸಂಬಂಧಿಸಿದವರೇ ಅಲ್ಲ. ಶ್ರೀ ಶಂಕರಾಚಾರ್ಯರ ಮಠದವರು ಪೂಜಿಸುವ ಚಂದ್ರಮೌಳೀಶ್ವರ ಲಿಂಗವು ಇಷ್ಟಲಿಂಗ ವಲ್ಲ. ಒಂದು ವೇಳೆ ರೇಣುಕರು ಕೊಟ್ಟಿದ್ದರೆ ಶ್ರೀ ಶಂಕರಾಚಾರ್ಯರು ಗುರುಗಳನ್ನು ಸ್ತುತಿಸದೆ ಇರುತ್ತಿದ್ದರೆ?

ಬಾಳೇಹೊನ್ನೂರು ಮಠದಲ್ಲಿ ಪೂಜಿಸಲ್ಪಡುತ್ತಿದ್ದ ಚಂದ್ರಮೌಳೀಶ್ವರ ಲಿಂಗವು ಶೃಂಗೇರಿ ಮಠಕ್ಕೆ ಹೇಗೆ ಬಂದಿತೆಂಬ ಬಗ್ಗೆ ಕೆಳದಿ ರಾಜರ ಒಂದು ಶಾಸನವಿದೆ. (ಶಾಸನದ ಪೂರ್ಣಪಾಠ ಕಾಶೀನಾಥ ಶಾಸ್ತ್ರಿಗಳ ನಿಜ ಜೀವನ ಚರಿತ್ರೆ ಪುಸ್ತಕದ ಪುಟ 46ರಲ್ಲಿ)

"ರಾಜಾಧಿರಾಜ ಸೋಮಶೇಖರ ನಾಯಕರು ಶಕವರುಷ 1594, ಆನಂದನಾಮ ಸಂವತ್ಸರದ ವೈಶಾಖ ಬಹುಳ ದ್ವಿತೀಯದಂದು ಬಾಳೆಹೊನ್ನೂರು ಸಿಂಹಾಸನದ ಮಠದ ಗುರು ಶಾಂತಸ್ವಾಮಿ ಎಂಬುವವರ ದುಷ್ಟ ಕೃತ್ಯಾದಿಗಳ ನಡುವಳಿಕೆಗೋಸ್ಕರ ಚಂದ್ರಮೌಳೀಶ್ವರ ಬಲದ ಶಂಖ ಏಕಬೆತ್ತ ಮುತ್ತಿನ ಚವುಕಳಿ ಇತ್ಯಾದಿ..... ಶೃಂಗೇರಿ ಅಗ್ರಹಾರದಲ್ಲಿರತಕ್ಕ ಶಂಕರಾಚಾರ್ಯರ ಕರಸಂಜಾತರಾದ ಶೃಂಗಶಾಸ್ತ್ರಿಯೆಂಬಾತಗೆ........"

ಹೀಗೆ ಬಾಳೇಹೊನ್ನೂರು ಮಠದ ಸ್ವಾಮಿಯೋರ್ವರ ನಡತೆಯಿಂದ ಕ್ರುದ್ಧರಾಗಿ ಕೆಳದಿ ರಾಜರು ಚಂದ್ರಮೌಳೀಶ್ವರ ಲಿಂಗ, ಇತರ ಸಾಮಗ್ರಿ ನೀಡಿ ಜೊತೆಗೆ ಅದರ ಪೂಜೆಗಾಗಿ ಕಪ್ಪಕಾಣಿಕೆ ಸಹ ಕೊಟ್ಟುದಾಗಿ ತಿಳಿದುಬರುತ್ತದೆ.

ಗುರು ವರ್ಗ ಎಂಬ ಕಲ್ಪನೆಯ ಸೃಷ್ಟಿ

ಇದಕ್ಕೆ ಪ್ರೇರಕರು ಕಾಶೀನಾಥ ಶಾಸ್ತ್ರಿಗಳು. ಇವರ ಜನ್ಮನಾಮ ಮುದುಕಯ್ಯ. ಕಾಶಿಗೆ ಹೋಗಿ ಅಲ್ಲಿಯ ಜಂಗಮವಾಡಿ ಮಠದಲ್ಲಿ ಆಶ್ರಯ ಪಡೆದು, ಸಂಸ್ಕೃತ ಅಭ್ಯಾಸ ಮಾಡಿ (ಜಾತಿ) ಜಂಗಮಾಧಿಕ್ಯತೆಗೆ ಪ್ರಚೋದನೆ ಕೊಡಲು ಕೆಲವರನ್ನು ಹುರಿದುಂಬಿಸಿದರು.

"ಈತನಂತೆ ಅಲ್ಪಸ್ವಲ್ಪ ಕಾಕುಪೋಕು ವಿದ್ಯೆಗಳನ್ನು ಕಲಿತ ಕೆಲಶಾಸ್ತ್ರಿಗಳು ಒಟ್ಟಾಗಿ ತಾವು ಸಮಾಜದಲ್ಲಿ ಮುಂದೆ ಬರಬೇಕೆಂದು ಹವಣಿಸಿ ಅಜ್ಞಾನದೆಶೆಯಲ್ಲಿದ್ದ ಕೆಲವು ಗುರುಗಳೆಂಬ ವರನ್ನು "ನಿಮ್ಮ ಗೌರವವು ಉಳಿದಿರುವುದಿಲ್ಲ. ಸಮಾಜದಲ್ಲಿ ನಿಮ್ಮ ವರ್ಚಸ್ಸು ಕಡಿಮೆಯಾಗಿದೆ. ವಿರಕ್ತರೇ ನಿಮಗೆ ಸಲ್ಲತಕ್ಕ ಮಾನಮರ್ಯಾದೆ ಬಾಬ್ತು ಕಾಣಿಕೆ ಮೊದಲಾದವನ್ನು ಅಪಹರಿಸು ವರು. ಸಮಾಜದಲ್ಲಿ ಇವರೇ ಎಲ್ಲ ಪೂಜ್ಯತ್ವಕ್ಕೆ ಅಧಿಕಾರಿಗಳಾಗಿರುತ್ತಾರೆ. ಮತ್ತು ಬಸವಾದಿ ಪ್ರಮಥರ ಸ್ತೋತ್ರವೇ ವೀರಶೈವರ ಬಾಯಿಂದ ಸದಾ ಹೊರಡುತ್ತಿದೆ. ನೀವು ಸಮಾಜದಲ್ಲಿ ಶ್ರೇಷ್ಠಪೀಠಕ್ಕೆ ಹೊಂದಿದವರೆನಿಸಿಕೊಳ್ಳಬೇಕಾದರೆ ಬಸವಾದಿ ಶರಣರನ್ನೂ ಶೂನ್ಯ ಸಿಂಹಾಸನಾಧಿ

ಪತಿಗಳಾದವರನ್ನೂ ನಿಂದಿಸುವ ಕಾರ್ಯವನ್ನು ಕೈಕೊಳ್ಳದ ವಿನಃ ನೀವು ಮುಂದಕ್ಕೆ ಬರಲಾರಿರಿ" ಎಂದು ಮೊದಲಾಗಿ ಅವರನ್ನು ಹುರುದುಂಬಿಸಿ ದುರ್ಬೋಧ ಮಾಡಿ ಅಲ್ಲಿ ಒಂದು ಪಂಚಾ ಚಾರ್ಯ ಸಭೆಯನ್ನೇರ್ಪಡಿಸಿ ಅದರಲ್ಲಿ ತಮ್ಮ ಧ್ಯೇಯಕ್ಕನುಸರಿಸಿ ಕೆಲವು ಗುಪ್ತನಿರ್ಧಾರಗಳನ್ನು ಮಾಡಿದರು.

ಇದೇ ಧ್ಯೇಯಕ್ಕನುಗುಣವಾಗಿ ಮೊದಲನೇ ಸಭೆಯು ಕುಂದಗೋಳದಲ್ಲಿಯೂ, ಎರಡನೇದನ್ನು ನವಲಗುಂದದಲ್ಲಿಯೂ ಸಭೆಯು ಬಾಗಿಲವನ್ನು ಬಂದಿಟ್ಟು, ಕೇವಲ ಜ್ಞಾನವಿಲ್ಲದ ದುರ್ವಿದಗ್ಧರು ಮಾತ್ರ ಸೇರಿ ಗುರುವರ್ಗವನ್ನು ಸ್ಥಾಪಿಸಿದರು. ವೀರಶೈವರಲ್ಲಿ ಭಕ್ತರನ್ನು ಕೀಳುವರ್ಗ ದವರನ್ನಾಗಿ ನಿರ್ಧರಿಸಿದರು. ಈ ಸಭೆಗಳಲ್ಲಿ ಭಕ್ತರು ಯಾರೇ ಇರಲಿ, ಅವರು ಮಾಹೇಶ್ವರ ರಾಗಲಿಕ್ಕೆ ಬರುವುದಿಲ್ಲೆಂದು ಮೊದಲಿಗೆ ತಮ್ಮ ನವೀನ ಗುರುವರ್ಗವನ್ನು ಬಲಪಡಿಸಲಿಕ್ಕೆ ಬೇಕಾಗುವ ನಿರ್ಣಯಗಳನ್ನು ಮಾಡಿ ಸಭೆಯನ್ನು ಮುಗಿಸಿದರು. ಈ ಎರಡೂ ಸಭೆಗಳಲ್ಲಿ ಇವರ ತುಚ್ಛವಾದ ಮತ್ತು ಸಮಾಜದ ಐಕ್ಯಕ್ಕೆ ಘಾತುಕವಾದ ನಿರ್ಣಯಗಳನ್ನು ಖಂಡಿಸಲಿಕ್ಕೆ ವಿದ್ವಾಂಸರು ಸಭೆಯಲ್ಲಿ ಬರಲು ಅಪ್ಪಣೆ ಕೇಳಿದರೆ ಅದನ್ನು ಮಾನ್ಯ ಮಾಡದೆ ತಮ್ಮ ಗುಪ್ತ ಕಾರ್ಯಸ್ಥಾನವನ್ನು ನಡೆಯಿಸಿದರು. ಈ ರೀತಿ ಕೆಲವು ಜನರ ಬೆಂಬಲವು ತನಗೆ ಸಿಕ್ಕಿದ್ದಕ್ಕೆ ಮುದುಕಯ್ಯನು ಹಿಗ್ಗಿ, ಆದರೂ, ವೀರಶೈವರನೇಕರು ಈ ಸಭೆಯ ಧ್ಯೇಯಕ್ಕೆ ವಿರೋಧಿಗಳಿರುವದನ್ನು ತಿಳಿದು ಧಾರವಾಡ ಶುಭೋದಯ ಪತ್ರದಲ್ಲಿ ಆರ್. ಶ್ರೀನಿವಾಸಾಚಾರ್ಯನೆಂಬ ಕಳ್ಳ ಹೆಸರಿನಿಂದ ವೀರಶೈವ ಸಮಾಜಕ್ಕೆ ಪರಮಪೂಜ್ಯರೆನಿಸಿದ ಶ್ರೀಮದ್ಬಸವ, ಚನ್ನಬಸವ, ಅಲ್ಲಮಪ್ರಭುಗಳನ್ನು ತನ್ನ ಅಪವಿತ್ರ ನಾಲಿಗೆಯಿಂದ ಮನಬಂದಂತೆ ನಿಂದಿಸಿ ಅವಾಚ್ಯ ಶಬ್ದಗಳಿಂದ ಶೂನ್ಯ ಸಿಂಹಾಸನಾಧೀಶ್ವರರನ್ನು ಜರಿದು ತನ್ನ ಹೇಯವಾದ ಸಂಕಲ್ಪವನ್ನು ಈಡೇರಿಸಿ ಕೊಂಡನು."

ಇಂತಹ ವಿಲಕ್ಷಣ ವಿಭಜನೆಯಿಂದ ತಪ್ತರಾದ ಲಿಂಗಾಯತ ಮುಖಂಡರು ಪರಸ್ಪರ ಚರ್ಚಿಸಲು ನಿರ್ಧರಿಸಿ ಬಹಿರಂಗ ಆಹ್ವಾನ ನೀಡಿ ಶರಣ. ಸಿದ್ದರಾಮಪ್ಪ ಪಾವಟೆಯವರ ನೇತೃತ್ವದಲ್ಲಿ ಬೆಳಗಾವಿಯಲ್ಲಿ ಒಂದು ಸಭೆ ಕರೆದರು. ಆಗ ಕಾಶೀನಾಥ ಶಾಸ್ತ್ರಿಗಳು ಚರ್ಚೆಯಲ್ಲಿ ಭಾಗವಹಿಸುವ ಧೈರ್ಯ ತೋರದೆ ಮುಖಭಂಗ ಹೊಂದಿದರು. ಈತನ ಪ್ರಚೋದನೆಗೆ ಬಾಳೆಹಳ್ಳಿ, ಉಜ್ಜಯಿನಿ, ಕೇದಾರ, ಕಾಶಿ ಸ್ವಾಮಿಗಳು ಒಳಗಾದರು. ತಮ್ಮ ವಿಚಾರದ ಪ್ರಚಾರಕ್ಕಾಗಿ ಪಂಚಾಚಾರ್ಯ ಪ್ರಭಾ ಎಂಬ ವಾರಪತ್ರಿಕೆಯನ್ನು ಮೈಸೂರಿನಲ್ಲಿ ಆರಂಭಿಸಲು ಪ್ರೋತ್ಸಾಹ ನೀಡಿದರು. ಆಗ ಮುದುಕಯ್ಯನು ಕಾಶೀನಾಥ ಶಾಸ್ತ್ರಿಗಳಾದರು. ಇದಕ್ಕೆ ಪ್ರತಿಯಾಗಿ ಹುಬ್ಬಳ್ಳಿಯ ಶ್ರೀಗುರು ಸಿದ್ದೇಶ್ವರ ಪ್ರಿಂಟಿಂಗ್ ವರ್ಕ್ಸದಲ್ಲಿ 1923ರಲ್ಲಿ ಕೆಲವು ಉತ್ತರಗಳು ಮುದ್ರಣಗೊಂಡವು. ಶರ್ಮ ದರ್ಪಹರಣ ಎಂಬ ಅಂಥ ಲೇಖನದ ಕೆಲವು ವಿಚಾರ ಹೀಗಿವೆ. "ನಮ್ಮ ಗುರು ವರ್ಗ ದವರೆನಿಸಿಕೊಳ್ಳುವವರು ಒಬ್ಬನು ಹಿರಿಯ ಕುಲದವನು ಇನ್ನೊಬ್ಬನು ಕಿರಿಯ ಕುಲದವನು ವೀರಶೈವರಲ್ಲಿ ಇವರು ಬ್ರಾಹ್ಮಣರು ಇವರು ಶೂದ್ರರು ಎಂದು, ಶ್ರೀ ಬಸವನುದ್ಧರಿಸಿದ ವೀರಶೈವ ಸಮಾಜದ ಒಕ್ಕಟ್ಟನ್ನು ಸಡಲಿಸಿ ಅದನ್ನು ಪಲ್ಲಟಿಸಿ ಭಿನ್ನವಿಭಿನ್ನವಾಗಿ ಮಾಡಿ ಅದರ ವಿನಾಶಕ್ಕೆ ಕಾರಣೀ ಭೂತವಾದ ಉಪಾಯಗಳನ್ನು ಮುದುಕಯ್ಯನ - ಇವನಿಗೆ ಇತ್ತೀಚೆಗೆ ಬೆಂಬಲವಾಗಿರುವ ಶಿರಸಿ ಗುರುಶಾಂತಯ್ಯನ ಮುಖಂಡತ್ವದಿಂದ ಕೈಕೊಂಡದ್ದನ್ನು ಪ್ರತಿಯೊಬ್ಬ ವೀರಶೈವನು ತನ್ನಲ್ಲಿರುವ ಸದಸದ್ವಿವೇಕ ಬುದ್ಧಿಯಿಂದ ವಿಚಾರಿಸಿದರೆ ಈ ನವೀನ ಶರ್ಮವರ್ಗವು (ಇತ್ತೀಚೆಗೆ ಗುರುಗಳೆನಿಸಿಕೊಳ್ಳುವವರು) ವೀರಶೈವ ಸಮಾಜದ ಬಂಧುರತೆಗೆ ಎಷ್ಟು ಘಾತುಕವಾಗಿದೆ

ಎಂಬುದು ಒಡೆದು ಕಾಣುವುದು.

"ಹೀಗೆ ನವೀನ ವರ್ಗದವರ ಉದ್ಧಾರಕ್ಕಾಗಿ ಬದ್ಧಕಂಕಣರಾಗಿದ್ದ ಕಾಶೀನಾಥ ಶಾಸ್ತ್ರಿಗಳಿಗೆ ತಾವು ಸ್ಥಾಪಿಸಿದ ಗುರುವರ್ಗವೆಂಬುದು ಪುರಾತನವೆಂದೂ ವಿರಕ್ತರಿಗಿಂತಲೂ ತಾವು ಹೆಚ್ಚಿನವರೆಂದೂ ತೋರಿಸಿಕೊಳ್ಳುವುದೇ ಮುಖ್ಯ ಆಶಯವಾಗಿದ್ದಿತು." (- ಗುಂಡಶಾಸ್ತ್ರಿ ಪುಟ-42)

ಕಾಶೀನಾಥಶಾಸ್ತ್ರಿಗಳುತಮ್ಮಆತ್ಮಕಥೆಯಲ್ಲಿ ಹೀಗೆ ಬರೆದುಕೊಂಡಿದ್ದಾರೆ. ಕಲಿಪುರುಷರಾದ ವಿರಕ್ತರ ಉಪಟಳವನ್ನು ನಾಶ ಮಾಡಲು ಪ್ರಪಂಚದಲ್ಲಿ ಶಾಸ್ತ್ರವಿಹಿತವಾದ ಚಳುವಳಿಯನ್ನು ಎಬ್ಬಿಸಬೇಕಾಯಿತು. ಎಂದು. ಈ ಚಳುವಳಿಯ ವಿಷಫಲಗಳೆಂದರೆ "ಪಂಚವಿಂಶತಿ ಪ್ರಶ್ನಪ್ರಕಾಶ" ಮತ್ತು "ಬಸವಧ್ವಾಂತ ದಿವಾಕರ" ಎಂಬ ಗ್ರಂಥಗಳು. ಇವುಗಳ ತುಂಬ ವಿರಕ್ತರ ದೂಷಣೆ ಮತ್ತು ಬಸವ ಅವಹೇಳನೆಗಳೇ ತುಂಬಿರುವುವು. ಈ ಜಾತಿವಾದಿ ಶಾಸ್ತ್ರಿಗಳು ಅಸ್ಪೃಶ್ಯತಾ ನಿವಾರಣೆಗಾಗಿ ಮಹಾತ್ಮ ಗಾಂಧೀಜಿ ಆರಂಭಿಸಿದ ಚಳುವಳಿಯನ್ನು ಟೀಕಿಸುತ್ತಾರೆ. "ಗಾಂಧಿಯವರು ವರ್ಣ ಸಾಂಕರ್ಯವನ್ನು ಮಾಡುವುದರಲ್ಲಿ ಮೊದಲನೆಯ ಕಲಿ ಪುರುಷರಾಗಿದ್ದಾರೆ. ಇವರನ್ನು ಸನಾತನ ಹಿಂದು ಧರ್ಮದ ಧ್ವಂಸಕಮೂರ್ತಿಯೆಂದರೆ ಇದನ್ನು ಯಾರೂ ಅಲ್ಲಗಳೆಯಲಾರರು. ಈ ಚಂಚಲಮೂರ್ತಿಗಳು ಜೈಲಿಗೆ ಹೆದರಿ ಅಸ್ಪೃಶ್ಯೋದ್ಧಾರದ ಸೋಗು ಹಾಕಿಕೊಂಡಿದ್ದಾರೆ."ಎಂದು ಶಾಸ್ತ್ರಿಗಳು ಬರೆಯುವುದು ನೋಡಿದಾಗ ಅವರ ಕೂಪಮಂಡೂಕ ಮನೋಭಾವ ಸ್ಪಷ್ಟವಾಗುತ್ತದೆ. ಇವರು ಸುಧಾರಣಾ ವಿರೋಧಿಗಳೆಂದು ಮನವರಿಕೆಯಾಗುವುದು.

ಲಿಂಗಾಯತ ಸಮಾಜವು 12ನೆಯ ಶತಮಾನದಿಂದಲೂ ಹಲವಾರು ಜಾತಿ ಮತ ಪಂಥಗಳವರನ್ನು ಬರಮಾಡಿಕೊಂಡಿದೆ. ಆದರೆ ಇದನ್ನು ಕೆಟ್ಟ ಭಾಷೆಯಲ್ಲಿ ನಿಂದಿಸಿರುವ ಪಂಚಾಚಾರ್ಯ ಪ್ರಭಾ ಸಂಪಾದಕರಾದ ಗುರುಶಾಂತ ಶಾಸ್ತ್ರಿಗಳ ಬರಹ ನೋಡಿರಿ. (1-12-1930ರ ಸಂಚಿಕೆ) ಈ ಬರಹದ ಹಿಂದಿನ ಕೈ ಕಾಶೀನಾಥ ಶಾಸ್ತ್ರಿಗಳೇ ಅಹುದು.

"ಈ ಕಾಲದಲ್ಲಿ ಲಿಂಗಧಾರಿಗಳಾದ ಕೆಲಜನ ಕನ್ವರ್ಟ (ಮಿಶ್ರ)ರೂ, ಕಡಿಮೆ ಕುಲದವರೂ, ದುರ್ಬೀಜಜಾತರೂ, ಅನಾದಿ ಸಂಸಿದ್ಧ ಸಂಪ್ರದಾಯ ಶುದ್ಧರಾದ ವಂಶೀಯ ಗುರುಗಳನ್ನು ಬಿಟ್ಟು ಒಕ್ಕಲಿಗನೇ ಇರಲಿ, ಜಾಡನೇ ಇರಲಿ,ಬಣಜಿಗನೇ ಇರಲಿ, ಅನ್ಯರೇತೋಜಾತನೇ ಇರಲಿ, ದುರಭಿಮಾನ ಪೂರಿತರಾಗಿ ತಮ್ಮ ತಮ್ಮ ಪಂಗಡಗಳಲ್ಲಿ ಗುರುಗಳನ್ನು ಮಾಡಿಕೊಳ್ಳಹತ್ತಿದ್ದಾರೆ. ಈ ನವೀನನಾಸ್ತಿಕರಿಗೆ ಯಾವ ಬೋಧೆಯನ್ನು ಮಾಡಿದರೂ ಪ್ರಯೋಜನವಾಗುವಂತಿಲ್ಲ. ಜಂಗಮರಿಗೂ ನಮಗೂ ಏನು ವ್ಯತ್ಯಾಸವಿದೆ? ಅವರಲ್ಲಿದ್ದ ಅವಯವಗಳು ನಮ್ಮಲ್ಲಿಯೂ ನಮ್ಮಲ್ಲಿದ್ದ ಅವಯವಗಳು ಅವರಲ್ಲಿಯೂ ಇವೆ. ಹೀಗಿದ್ದ ಮೇಲೆ ಪರಸ್ಪರ ವ್ಯತ್ಯಾಸವೇನು। ಎಂದು ಪಾಷಂಡಿಗಳಿಗಿಂತಲೂ ಹೆಚ್ಚಾಗಿ ಬೊಗಳುತ್ತಿರುವರು. ಶ್ವಾನಸದೃಶರಾದ ಈ ಪಾಪಾತ್ಮರಿಗೆ ಯಾವತ್ತು ಅವಯವಗಳಿಂದ ಸಮಾನರಾಗಿದ್ದ ತಾಯಿಯೂ, ಹೆಂಡತಿಯೂ ಒಂದೇ ಸರಿ." (ಪುಟ-63)

ಮೈಸೂರರಿನ ಲಿಂಗಾಯತರು ಉಗ್ರವಾಗಿ ಇದನ್ನೆಲ್ಲ ವಿರೋಧಿಸಿದ್ದಲ್ಲದೆ ರಂಭಾಪುರ ಸ್ವಾಮಿಗಳು ಮೈಸೂರು ಸಂದರ್ಶನಕ್ಕೆ ಸಂಚಾರ ಕೈಗೊಂಡಾಗ ಸೂಕ್ತ ಪ್ರತಿಕ್ರಿಯೆ ನೀಡಲಿಲ್ಲ; ಅದೇ ರೀತಿ ನಂಜನಗೂಡು, ಚಾಮರಾಜನಗರ ಮುಂತಾದ ಕಡೆ ಬಂದಾಗಲೂ ವಿರೋಧವನ್ನು ಎದುರಿಸಬೇಕಾಯಿತು. ಇವರ ಉತ್ಸವಕ್ಕೆ ವಿಶೇಷ ಅಡಚಣೆಯುಂಡಾಗಿ ಕಡೆಗೆ ಕೆಲವು ಸಂದು

ಗೊಂದುಗಳಲ್ಲಿ ಉತ್ಸವ ಮಾಡಿಸಿಕೊಂಡರಂತೆ. (ಪುಟ -64)

ಕಾಶೀನಾಥ ಶಾಸ್ತ್ರಿಗಳ ವೀರಶೈವ ರತ್ನಕೃತಿಯಲ್ಲಿ ಅವರು ವರ್ಣಾಶ್ರಮಗಳ ವಿಚಾರವಾಗಿ ಪ್ರಸ್ತಾಪಿಸುತ್ತ ಹೇಳುತ್ತಾರೆ, "ಸಾವಿರಾರು ಗ್ರಂಥಗಳಲ್ಲಿ ವರ್ಣಾಶ್ರಮ ಧರ್ಮಗಳ ವಿಚಾರವು ಪ್ರತಿಪಾದಿಸಲ್ಪಟ್ಟಿದ್ದರೂ.... ಈ ಕನ್ವರ್ಟರು (ಮಿಶ್ರರು).... ವೀರಶೈವರ ಮತದಲ್ಲಿ ವರ್ಣಾಶ್ರಮಗಳಿರುವುದಿಲ್ಲವೆಂದು ಅಪಲಪಿಸಿರುವುದನ್ನು ನೋಡಿ ಅನ್ಯಮತೀಯರು ಈ ವಿಷಯವು ನಿಜವಿರಬಹುದೆಂದು ಭಾವಿಸಿದ್ದಾರೆ....."ಎಂದೂ, ವೀರಶೈವ ಮತೀಯರಾದ ತ್ರೈವರ್ಣಿಕ ಸಜಾತೀಯ ದ್ವಜರು ಸಜಾತೀಯ ದ್ವಿಜರಲ್ಲಿಯೇ ಭೋಜನ ಮಾಡಬೇಕೆಂದೂ,.... ಶಿವೋಕ್ತವಾದ ಜಾತಿಮರ್ಯಾದೆಯನ್ನು ಯಾವನು ಮೀರಿ ನಡೆಯುವನೋ ಅವನು ಚಂಡಾಲನೆಂದೂ, ಸರ್ವಕರ್ಮಬಹಿಷ್ಕೃತನೆಂದೂ ಬರೆದಿರುತ್ತಾರೆ. ಇರಲಿ; ಮೊನ್ನೆಮೊನ್ನೆ ರಂಭಾಪುರೀ ಸ್ವಾಮಿಗಳು ಬೆಂಗಳೂರು ಮೈಸೂರು ಪ್ರಾಂತಗಳಲ್ಲಿ ಸಂಚಾರ ಮಾಡಿದರಷ್ಟೇ! ಆಗ ಇಡೀ ಸಮಾಜವು ಇವರನ್ನು ಪುರಸ್ಕರಿಸದಿದ್ದರೂ, ಕೆಲವರು ಸ್ವಾಗತಿಸಿ, ತಮ್ಮ ತಮ್ಮ ಮನೆಗಳಲ್ಲಿ ಪಾದಪೂಜೆಗಳನ್ನು ಸಹ ಮಾಡಿದರು. ಇವರು ಮನೆಗಳಲ್ಲೆಲ್ಲಾ ರಂಭಾಪುರಿ ಸ್ವಾಮಿಗಳೂ ಅವರ ಕಡೆಯವರೂ ಭೋಜನ ಮಾಡಿ ಬರಲಿಲ್ಲವೇ? ಇವರೆಲ್ಲರೂ ಯಾವ ಯಾವ ವರ್ಣಗಳಿಗೆ ಸೇರಿದವರು? ರಂಭಾಪುರೀ ಸ್ವಾಮಿಗಳ ವರ್ಣವಾವುದು? ಫಕೀರಯ್ಯನವರ ಮಕ್ಕಳಾದ ಗುರುಶಾಂತಶಾಸ್ತ್ರಿಗಳ ವರ್ಣವಾವುದು? ಇವರೂ ಪಾದಪೂಜೆ ಮಾಡಿದವರೂ ಎಲ್ಲರೂ ಒಂದೇ ವರ್ಣದವರೇ? ಇಲ್ಲವಾದರೆ ಇವರೆಲ್ಲರೂ ಶಿವೋಕ್ತವಾದ ಜಾತಿವರ್ಯಾದೆಯನ್ನು ಮೀರಿದಂತಾಗಲಿಲ್ಲವೇ? ಇದರಿಂದ ಇವರೆಲ್ಲರೂ ಚಂಡಾಲತ್ವವೂ, ಸರ್ವಕರ್ಮ ಬಹಿಷ್ಕೃತತ್ವವೂ ಪ್ರಾಪ್ತವಾಗಲಿಲ್ಲವೇ?

ಈ ಹಿಂದೆ, 1921ಕ್ಕೂ ಮೊದಲು ಪಂಚಪೀಠಾಧೀಶರಿಗೆ ಜಗದ್ಗುರು ಪದವು ಬಳಕೆಯಾಗುತ್ತಿರಲಿಲ್ಲ. ಈ ಪದವನ್ನು ರೂಢಿಗೊಳಿಸಿದವರು ಕಾಶೀನಾಥ ಶಾಸ್ತ್ರಿಗಳೆ! ವೀರಶೈವವೇ ಬೇರೆ ಬಸವ ಪಂಥವೇ ಬೇರೆ ಎಂದು ಆಕ್ರೋಶದಿಂದ ಕಾಶೀನಾಥ ಶಾಸ್ತ್ರಿಗಳು ಹೇಳುತ್ತಾರೆ. ರೇಣುಕಾದಿ ಪಂಚಾಚಾರ್ಯರನ್ನು ಹುಟ್ಟಿಸುವಲ್ಲಿ ಶಾಸ್ತ್ರಿಗಳು ಸುಳ್ಳಿನ ಹಂದರವನ್ನು ಹಬ್ಬಿಸಿದ್ದಾರೆ ಆದರೆ ವೀರಶೈವ ಲಿಂಗಾಯತ ಬೇರೆ ಬೇರೆ ಎಂದು ಹೇಳುವಲ್ಲಿ ಪರಮ ಸತ್ಯವನ್ನು ನುಡಿದ್ದಾರೆ. ಸೈದ್ಧಾಂತಿಕವಾಗಿ, ಸಾಮಾಜಿಕವಾಗಿ ಇವೆರಡೂ ಕೂಡದ ಮಾರ್ಗಗಳು. ಕಾಶೀನಾಥ ಶಾಸ್ತ್ರಿಗಳು ಪ್ರತಿಪಾದಿಸುವಂತೆ ವೀರಶೈವವು ವರ್ಣಾಶ್ರಮಾಧಾರಿತ ವೈದಿಕ ಮತ. ಲಿಂಗಾಯತವು ವರ್ಣಾಶ್ರಮಾಧಾರಿತ ವ್ಯವಸ್ಥೆಯನ್ನು ವಿರೋಧಿಸುವ ಸ್ವತಂತ್ರ ಧರ್ಮ. ವೀರಶೈವದ ಧ್ಯೇಯ ವಸ್ತು ಶಿವ, ಲಿಂಗಾಯತದ ಧ್ಯೇಯ ವಸ್ತು ಸೃಷ್ಟಿಕರ್ತನಾದ ಲಿಂಗದೇವ.

ಗುಂಡಶಾಸ್ತ್ರಿಗಳು ಪ್ರತ್ಯಕ್ಷದರ್ಶಿಗಳಾಗಿ ಕಾಶೀನಾಥ ಶಾಸ್ತ್ರಿಗಳ ಸುಳ್ಳು ಸೃಷ್ಟಿಯನ್ನು ಬಯಲು ಮಾಡಿ ಬಹುದೊಡ್ಡ ಉಪಕಾರವನ್ನು ಇತಿಹಾಸಕ್ಕೆ ಮಾಡಿರುವರಲ್ಲದೆ ಹೇಗೆ ಅಖಂಡವಾಗಿದ್ದ ಸಮಾಜವನ್ನು ಜಂಗಮ ಮತ್ತು ಭಕ್ತರೆಂದು, ಧಾರ್ಮಿಕ ಜಗತ್ತಿನಲ್ಲಿ ವಿರಕ್ತ ವರ್ಗ, ಗುರು ವರ್ಗ ಎಂದು ಒಡೆಯುವ ಕೆಲಸವನ್ನು ಕಾಶೀನಾಥ ಶಾಸ್ತ್ರಿಗಳು ಮಾಡಿದರೆಂಬುದನ್ನು ಸಾಧಾರಪೂರ್ವಕವಾಗಿ ಪ್ರಸ್ತುತ ಕೃತಿಯಲ್ಲಿ ಪ್ರತಿಪಾದಿಸಿ ಅಭಿನಂದನೀಯರಾಗಿದ್ದಾರೆ. ಮರುಮುದ್ರಣ ಮಾಡಿ ಬಸವ ಧರ್ಮ ಪ್ರಕಾಶನ, ಕಲಬುರ್ಗಿ ಇವರೂ ಅಭಿನಂದಿನೀಯರಾಗಿದ್ದಾರೆ.

★★★

ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ
2011 ರ ಜನವರಿ 11, 12, 13, 14, 15ರಂದು ನಡೆಯಲಿರುವ
ಇಪ್ಪತ್ನಾಲ್ಕನೆಯ ಶರಣಮೇಳದ ಅಂಗವಾಗಿ
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ
ಪ್ರಚಾರ ಪ್ರವಾಸ ಕಾರ್ಯಕ್ರಮ

ಆತ್ಮೀಯ ಶರಣ ಬಂಧುಗಳಿಗೆ, ಬಸವ ಸ್ಮರಣಪೂರ್ವಕ ಶುಭ ಹಾರೈಕೆಗಳು.

ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ. ನಿಮ್ಮ ಕ್ಷೇಮ ಹಾರೈಸುತ್ತೇವೆ. ಶರಣ ಬಂಧುಗಳ ಹಿಗ್ಗಿನ ಉತ್ಸವ, 2011ನೆಯ ಇಸವಿಯ ದಿ.11ರಿಂದ 15ರವರೆಗೆ ನಡೆಯುವ 24ನೆಯ ಶರಣ ಮೇಳದ ಪ್ರಚಾರಾರ್ಥ ಮತ್ತು ಸಂಘಟನೆ, ಸಂದರ್ಶನದ ದೃಷ್ಟಿಯಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗ ತಮ್ಮ ಊರಿಗೆ ಅವರು ಆಗಮಿಸುವ ದಿನಾಂಕದ ವೇಳಾ ಪಟ್ಟಿಯನ್ನು ಕಳಿಸಲಾಗಿದೆ. ಈ ದಿನಾಂಕಕ್ಕೆ ಕಾರ್ಯಕ್ರಮ ಏರ್ಪಡಿಸುವ ಬಗ್ಗೆ ತಮ್ಮ ಸಾಧ್ಯಾಸಾಧ್ಯತೆಯನ್ನು ಬೇಗನೆ ನಮಗೆ ದೂರವಾಣಿಯ ಮೂಲಕ ಅಥವಾ ಪತ್ರ ಮುಖೇನ ತಿಳಿಸಬೇಕು. ಬೆಂಗಳೂರು ವಿಳಾಸಕ್ಕೆ ವ್ಯವಹರಿಸಬೇಕು. ಕಾರಣಾಂತರದಿಂದ ನಿಮಗೆ ಕಾರ್ಯಕ್ರಮ ಏರ್ಪಡಿಸಲು ಆಗದೆ ಇದ್ದರೆ ಅಥವಾ ಇನ್ನೂ ಹೆಚ್ಚುವರಿ ದಿನಾಂಕಗಳು ಬೇಕಾಗಿದ್ದರೆ ತಕ್ಷಣ ತಿಳಿಸಿರಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಸಂದರ್ಶಿಸಲಿರುವ ಈ ಸಮಯವನ್ನು ಸಂಘಟನೆಗಾಗಿ ಬಳಸಿಕೊಳ್ಳುವುದೇ ಅಲ್ಲದೆ ದೀಕ್ಷಾ ಕಾರ್ಯಕ್ರಮಗಳನ್ನು ಏರ್ಪಡಿಸಲೂಬಹುದು. 2011 ನೆಯ ಇಸವಿಯ 24ನೆಯ ಶರಣ ಮೇಳದ ಸರ್ವತೋಮುಖ ಯಶಸ್ಸಿಗೆ ತಾವು ಸಹಕರಿಸುವಿರಾಗಿ ನಂಬಿದ್ದೇವೆ.

ವಾಸ್ತವ್ಯ : ಬೆಂಗಳೂರು
10-10-2010

ಪೂಜ್ಯ ಶ್ರೀಮನ್ ನಿರಂಜನ
ಮಹಾ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ

ವಿ.ಸೂ : ಕಾರಣಾಂತರದಿಂದ ದಿನಾಂಕಗಳಲ್ಲಿ ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.

ಕ್ರ.ಸಂ.	ದಿನಾಂಕ	ವಾರ	ಊರಿನ ಹೆಸರು
18.	18-11-2010	ಪ್ರಭು(ಗುರು)ವಾರ	ಚಳ್ಳಕೆರೆ
19.	19-11-2010	ಮಾತೃ(ಶುಕ್ರ)ವಾರ	ದೊಡ್ಡಉಳ್ಳಾರ್ತಿ
20.	20-11-2010	ಶರಣ(ಶನಿ)ವಾರ	ಚಿತ್ರನಾಯಕನ ಹಳ್ಳಿ
21.	21-11-2010	ದೇವ(ಭಾನು)ವಾರ	ಬಳ್ಳಾರಿ
22 .	22-11-2010	ಶಿವ(ಸೋಮ)ವಾರ	,,
23.	23-11-2010	ಬಸವ(ಮಂಗಳ)ವಾರ	ಶಿರಗುಪ್ಪ
24.	24-11-2010	ಚನ್ನ(ಬುಧ)ವಾರ	ರಾಯಚೂರು

25.	25-11-2010	ಪ್ರಭು(ಗುರು)ವಾರ	ಶಕ್ತಿನಗರ
26.	26-11-2010	ಮಾತೃ(ಶುಕ್ರ)ವಾರ	ಗಂಗಾವತಿ
27.	27-11-2010	ಶರಣ(ಶನಿ)ವಾರ	ಕೊಪ್ಪಳ
28.	28-11-2010	ದೇವ(ಭಾನು)ವಾರ	,,
29.	29-11-2010	ಶಿವ(ಸೋಮ)ವಾರ	,,
30.	30-11-2010	ಬಸವ(ಮಂಗಳ)ವಾರ	ಹುಬ್ಬಳ್ಳಿ
31.	01-12-2010	ಚನ್ನ(ಬುಧ)ವಾರ	ಧಾರವಾಡ
32.	02-12-2010	ಪ್ರಭು(ಗುರು)ವಾರ	ಮುಮ್ಮಿಗಟ್ಟಿ
33.	03-12-2010	ಮಾತೃ(ಶುಕ್ರ)ವಾರ	ಅವರಾದಿ
34.	04-12-2010	ಶರಣ(ಶನಿ)ವಾರ	ಸವದತ್ತಿ
35.	05-12-2010	ದೇವ(ಭಾನು)ವಾರ	,,
36.	06-12-2010	ಶಿವ(ಸೋಮ)ವಾರ	ಬೈಲಹೊಂಗಲ
37.	07-12-2010	ಬಸವ(ಮಂಗಳ)ವಾರ	,,
38.	08-12-2010	ಚನ್ನ(ಬುಧ)ವಾರ	ಬೆಳಗಾವಿ
39.	09-12-2010	ಪ್ರಭು(ಗುರು)ವಾರ	,,
40.	10-12-2010	ಮಾತೃ(ಶುಕ್ರ)ವಾರ	ಸಂಕೇಶ್ವರ
41.	11-12-2010	ಶರಣ(ಶನಿ)ವಾರ	ಗಡಿಹಿಂಗ್ಲಾಜ್
42.	12-12-2010	ದೇವ(ರವಿ)ವಾರ	ಗೋಕಾಕ್
43.	13-12-2010	ಶಿವ(ಸೋಮ)ವಾರ	,,
44.	14-12-2010	ಬಸವ(ಮಂಗಳ)ವಾರ	,,
45.	15-12-2010	ಚನ್ನ(ಬುಧ)ವಾರ	,,
46.	16-12-2010	ಪ್ರಭು(ಗುರು)ವಾರ	ಶೇಗುಣಸಿ
47.	17-12-2010	ಮಾತೃ(ಶುಕ್ರ)ವಾರ	ಖಿವಟಕೊಪ್ಪ
48.	18-12-2010	ಶರಣ(ಶನಿ)ವಾರ	ತಾಂವಶಿ
49.	19-12-2010	ದೇವ(ಭಾನು)ವಾರ	ಅಥಣಿ
50.	20-12-2010	ಶಿವ(ಸೋಮ)ವಾರ	ಅಡಹಳಹಟ್ಟಿ
51.	21-12-2010	ಬಸವ(ಮಂಗಳ)ವಾರ	ಜತ್ತ
52.	22-12-2010	ಚನ್ನ(ಬುಧ)ವಾರ	ಕನಮಡಿ
53.	23-12-2010	ಪ್ರಭು(ಗುರು)ವಾರ	ಚಡಚಣ
54.	24-12-2010	ಮಾತೃ(ಶುಕ್ರ)ವಾರ	ಬಿಜಾಪುರ
55.	25-12-2010	ಶರಣ(ಶನಿ)ವಾರ	ಗುಲಬರ್ಗಾ (ಬ.ಮಂಟಪ ನೃಪತುಂಗ ಕಾಲನಿ ಸಂಜೆ-6)

56.	26-12-2009	ದೇವ(ಭಾನು)ವಾರ	ಗುಲಬರ್ಗಾ(ಬ.ಮಂಟಪ ಮಹಾಂತನಗರ)
57.	27-12-2009	ಶಿವ (ಸೋಮ)ವಾರ	ಯಲಮಾಮಿಡಿ
58.	28-12-2009	ಬಸವ(ಮಂಗಳ)ವಾರ	ಉದಗೀರ
59.	29-12-2009	ಚನ್ನ(ಬುಧ)ವಾರ	ಬೀದರ
60.	30-12-2010	ಪ್ರಭು(ಗುರು)ವಾರ	ಕೋಳಾರ(ಕೆ)
61.	31-12-2010	ಮಾತೃ(ಶುಕ್ರ)ವಾರ	ಜಹಿರಾಬಾದ್
62.	01-01-2011	ಶರಣ(ಶನಿ)ವಾರ	ಹೈದ್ರಾಬಾದ್
63.	02-01-2011	ದೇವ(ರವಿ)ವಾರ	"
64.	03-01-2011	ಶಿವ(ಸೋಮ)ವಾರ	"
65.	04-01-2011	ಬಸವ(ಮಂಗಳ)ವಾರ	"
66.	05-01-2011	ಚನ್ನ(ಬುಧ)ವಾರ	"
67.	06-01-2011	ಪ್ರಭು(ಗುರು)ವಾರ	"
70.	07-01-2011	ಮಾತೃ(ಶುಕ್ರ)ವಾರ	"
71.	08-01-2011	ಶರಣ(ಶನಿ)ವಾರ	"
72.	09-01-2011	ದೇವ(ಭಾನು)ವಾರ	"
73.	10-01-2011	ಶಿವ(ಸೋಮ)ವಾರ	ಕೂಡಲ ಸಂಗಮಕ್ಕೆ ಪ್ರಯಾಣ

ಬಸವ ವಚನಾಮೃತ

517. ಜೀವನದ ವ್ಯರ್ಥತೆ

ಸಕ್ಕರೆಯ ಕೊಡನ ತುಂಬಿ ಹೊರಗೆ ಸವಿದಡೆ ರುಚಿಯುಂಟೆ?
ತಕ್ಕೈಸಿ ಭುಜತುಂಬಿ ಲಿಂಗಸ್ಪರ್ಶನವ ಮಾಡದೆ
ಅಕ್ಕಟಾ! ಸಂಸಾರ ವೃಥಾ ಹೋಯಿತ್ತಲ್ಲಾ!
ಅದೇತರ ಭಕ್ತಿ? ಅದೇತರ ಯುಕ್ತಿ?
ಕೂಡಿಕೊ, ಲಿಂಗದೇವನ. - ಬ.ವ.ದೀ. 515

ಒಂದು ಕೊಡದಲ್ಲಿ ಸಕ್ಕರೆಯನ್ನು ತುಂಬಿ, ಹೊರಗಡೆ ನೆಕ್ಕಿದರೆ ಸಿಹಿಯು ನಾಲಿಗೆಗೆ ಹತ್ತುವುದೆ? ನಮ್ಮ ಭುಜ, ತೋಳುಗಳು ಹರ್ಷದಿಂದ ಇಷ್ಟಲಿಂಗ ಪೂಜೆಯನ್ನು ಮಾಡಿ, ಸ್ಪರ್ಶನವನ್ನು ಮಾಡಬೇಕು. ಇಲ್ಲದಿದ್ದರೆ ಈ ಜೀವನವು ವ್ಯರ್ಥವಾಗಿ ಹೋಗುತ್ತದೆ. ಭಕ್ತಿಯಿಲ್ಲದೆ, ಪ್ರೀತಿಯಿಂದ ಲಿಂಗಪೂಜೆ ಮಾಡದೆ ಬರೀ ಲಿಂಗಧಾರಣೆ ಮಾಡಿಕೊಂಡರೆ ಏನು ಪ್ರಯೋಜನ? ಯಾಂತ್ರಿಕವಾಗಿ ಮಾಡುವ ಪೂಜೆ ಕೇವಲ ಒಂದು ಯುಕ್ತಿ ಮಾತ್ರ. ಪೂಜೆ ಮಾಡುತ್ತಾ ಲಿಂಗದೇವನ ಸಾಮರಸ್ಯದ ಆನಂದವನ್ನು ಅನುಭವಿಸು.

518. ಎನಗೇಕೆ ಒಲಿಯೆ?

ಕಾಳಿದಾಸಂಗೆ ಕಣ್ಣನಿತ್ತೆ, ಓಹಿಲಯ್ಯನ ನಿಜಪುರಕ್ಕೊಯ್ದೆ,
ನಂಬಿ ಕರೆದಡೋ ಎಂದೆ,
ತೆಲುಗು ಜೊಮ್ಮಂಗೆ ಒಲಿದೆ ದೇವಾ,
ಕೂಡಲಸಂಗಮದೇವಾ,
ಎನ್ನನೇಕೆ ಒಲ್ಲೆಯಯ್ಯಾ? - ಬ.ವ.ದೀ. 516

ಕಾಳಿದಾಸ ಅತ್ಯಂತ ಪ್ರಭಾವಶಾಲಿ, ಸಂಸ್ಕೃತ ಕವಿ. ಧಾರಾಪುರದ ಭೋಜರಾಜನ ಆಸ್ಥಾನಕವಿ. ಆತನು ಮಹಾಶಿವಭಕ್ತ. ಒಂದು ದಿವಸ ಶಿವಲಿಂಗವನ್ನು ಪೂಜಿಸುವಾಗ ತನ್ನ ಕಣ್ಣುಗಳನ್ನೇ ಕಿತ್ತು ಹರಿವಾಣದಲ್ಲಿಟ್ಟು ಆರತಿಯನ್ನು ಎತ್ತಿದನು. ಇದರಿಂದ ಸಂತುಷ್ಟನಾದ ಶಿವನು ಪುನಃ ಕಣ್ಣುಗಳನ್ನು ಕೊಟ್ಟನಲ್ಲದೆ, ನೀನು ಕಣ್ಣಿಲ್ಲದವರಿಗೆ ಕಣ್ಣು ಕೊಡುವವನಾಗು ಎಂದು ಆಶೀರ್ವದಿಸಿದನು. ಹೀಗೆ ಕಾಳಿದಾಸನಿಗೆ ಒಲಿದು ಕಣ್ಣುಗಳನ್ನು ಕೊಟ್ಟೆ.

ಓಹಿಲಯ್ಯ ಮಹಾಶಿವಭಕ್ತ, ಗುಜರಾತ್ ದೇಶದ ವಿಳಾಸವತಿ ಎಂಬಲ್ಲಿ ಆಳುತ್ತಿದ್ದ ನಿಃಕುಂಬ ಎಂಬ ರಾಜನಿಗೆ ಶಿವನ ಕರುಣೆಯಿಂದ ಹುಟ್ಟಿದ ಮಗುವೇ ಓಹಿಲಯ್ಯ. ಆತನು ಅಲ್ಪಾಯುಷಿ ಎಂಬುದಾಗಿ ಜ್ಯೋತಿಷಿಗಳು ಹೇಳಿದಾಗ, ಮರಣವನ್ನು ಗೆಲ್ಲುವುದಕ್ಕಾಗಿ ಓಹಿಲಯ್ಯನು ಸೌರಾಷ್ಟ್ರ ಸೋಮೇಶ್ವರನಿಗೆ ಧೂಪದ ಸೇವೆಯನ್ನು ಕೈಗೊಂಡ. ಬೇರೆಯವರು ಸಂಗ್ರಹಿಸಿದ ಗುಗ್ಗುಳವನ್ನು ಬಳಸದೆ ತಾನೇ ಸ್ವತಃ ಮಲಯ ಪರ್ವತಕ್ಕೆ ಹೋಗಿ ಶ್ರೀಗಂಧವನ್ನು ತಂದು ಧೂಪದ ಸೇವೆ ಮಾಡುತ್ತಿದ್ದ. ಹೀಗೆ ನಿಷ್ಠೆಯಿಂದ 24 ವರ್ಷ ಕಾಲ ಮಾಡಲು ಅವನನ್ನು ಶಿವನು ಕೈಲಾಸಕ್ಕೆ ಕರೆದೊಯ್ದನು.

ತೆಲಗು ಜೊಮ್ಮಯ್ಯ ಒಬ್ಬ ಶಿವಭಕ್ತ, ಅವನದು ಬೇಟೆಯ ಕಾಯಕ. ಅವನ ಮಹಿಮೆಯನ್ನು ಕೇಳಿ ಕೊಂಡಗುಳಿ ಕೇಶಿರಾಜನು ಜೊಮ್ಮಯ್ಯನ ಮನೆಗೆ ಬಂದ. ಆದರೆ

ಮನೆಯ ತುಂಬ ಮಾಂಸವಿದ್ದುದನ್ನು ಕಂಡು ಮುಜುಗರದಿಂದ ಮರಳಿ ಹೋದ. ಜೊಮ್ಮಯ್ಯನ ಮನೆಯಲ್ಲಿ ಉಣ್ಣಬೇಕು ಎಂಬ ಅಶರೀರವಾಣಿಯಾದಾಗ ಕೇಶಿರಾಜ ಮರಳಿ ಬಂದ. ಬಂದು ನೋಡುವಷ್ಟರಲ್ಲಿ ಮಾಂಸವೆಲ್ಲ ಪಂಚಭಕ್ಷ್ಯ ಪರಮಾನ್ನವಾಗಿದ್ದಿತು. ಪೆರ್ಮಾಡಿ ಎಂಬ ರಾಜನು ಜೊಮ್ಮಯ್ಯನ ಮಹಿಮೆ ಕೇಳಿ ಸಾವಿರ ಹೊನ್ನನಿತ್ತು ಗೌರವಿಸಿದನು.

ತಮಿಳುನಾಡಿನ ತಿರುವಾಲೂರಿನ ಒಡೆಯ ನೈನಾರು ಮತ್ತು ಯಸ್ಯಜ್ಞಾನ ದೇವಿಯ ಮಗ ಸೌಂದರ ನಂಬಿ, ಅವನು ತಾಳಗಳನ್ನು ದೇವಾಲಯದಲ್ಲಿ ಹಾಕುವ ಸೇವೆ ಮಾಡುತ್ತಿದ್ದ. ಒಮ್ಮೆ ದೇವಾಲಯದಲ್ಲಿ ನರ್ತಿಸುತ್ತಿದ್ದ ವಾಲ್ಮೀಕಿಪುರದ ಪರವೆ ನಾಚಿಯನ್ನು ಕಂಡು ಮೋಹಿಸಿ ಅವಳನ್ನು ದೊರಕಿಸಿಕೊಡಬೇಕೆಂದು ಶಿವನಿಗೆ ದುಂಬಾಲು ಬಿದ್ದ. ಶಿವನು ಕುಂಟಣಿ (ಮಧ್ಯವರ್ತಿ) ಯಾಗಿ ಪರವೆ ನಾಚಿಯ ತಾಯಿಯ ಬಳಿಗೆ ಹೋಗಿ ಸಾವಿರ ಹೊನ್ನು ಕೊಟ್ಟು ಅವಳ ಮಗಳನ್ನು ಮದುವೆ ಮಾಡಿಕೊಡಲು ಒಪ್ಪಿಸಿದ. ಸೌಂದರ ನಂಬಿಯ ಹೆಸರು ಹಲವಾರು ವಚನಗಳಲ್ಲಿ ಪ್ರಸ್ತಾಪವಾಗಿದೆ. ನಂಬಿ ಕರೆದಡೆ ಓ ಎನ್ನನೆ ಶಿವನು? ನಂಬಿಗೆ ಕುಂಟಣಿಯಾದವನ? ನಂಬಿ ಕರೆದಡೋ ಎಂದೆ -ಹೀಗೆಲ್ಲ ಪ್ರಸ್ತಾಪವಾಗಿದೆ.

"ನಂಬಿಯಂತಹ ವಿಲಾಸಿ ವ್ಯಕ್ತಿಯ ಭಕ್ತಿಗೊಲಿದು ಅವನ ಇಚ್ಛೆ ಪೂರೈಸಿದೆ, ತೆಲುಗು ಜೊಮ್ಮಯ್ಯನಂತಹ ಕ್ರೂರ ಉದ್ಯೋಗದ ಬೇಟೆಗಾರನಿಗೊಲಿದೆ. ನನ್ನಂತಹ ನಿಸ್ವಾರ್ಥ ಭಕ್ತನಿಗೇಕೆ ನೀನು ಒಲಿಯುತ್ತಿಲ್ಲ?" ಎಂದು ಗುರು ಬಸವಣ್ಣನವರು ಶಿವನನ್ನು ಕೇಳುತ್ತಾರೆ.

519. ದೇವನ ಚಿಂತೆ

ಪರರ ಚಿಂತೆ ನಮಗೇಕಯ್ಯ
ನಮ್ಮ ಚಿಂತೆ ನಮಗೆ ಸಾಲದೆ?
ಲಿಂಗದೇವಯ್ಯ ಒಲಿದಾನೊ ಒಲಿಯನೊ ಎಂಬ ಚಿಂತೆ
ಹಾಸಲುಂಟು, ಹೊದೆಯಲುಂಟು. - ಬ.ವ.ದೀ. 517

ಸಾಧಕ ಜೀವಿ ಬಸವಣ್ಣನವರು ಪರಮಾತ್ಮನ ಚಿಂತೆಯಲ್ಲಿ ತೊಡಗಿದ್ದಾರೆ. ಆಗ ಯಾರೋ ಬಂದು ಅವರಿವರ ಸುದ್ದಿ ಕುರಿತು ಹರಟುತ್ತಾರೆ. ಆಗ ಅಂಥವರಿಗೆ ಹೀಗೆ ಬುದ್ಧಿ ಹೇಳುತ್ತಾರೆ. "ಇನ್ನೊಬ್ಬರ ಚಿಂತೆ ನಮಗೆ ಏಕೆ? ಅವರು ಹಾಗೆ ಮಾಡಿದರು, ಇವರು ಹೀಗೆ ಮಾಡಿದರು ಎಂದೆಲ್ಲ ಪರರ ವಿಷಯ ಮಾತನಾಡುವುದು ಬೇಡ. ನಮ್ಮನ್ನೇ ಸುಧಾರಿಸಿಕೊಳ್ಳಲು ಮಾಡ ಬೇಕಾದ ಚಿಂತೆಗಳು ಬಹಳಷ್ಟಿವೆ. ಲಿಂಗದೇವನು ಈ ಜನ್ಮದಲ್ಲಾದರೂ ಒಲಿವನೋ ಒಲಿಯನೋ ಎಂಬ ಕಳವಳ ನನ್ನನ್ನು ಆವರಿಸಿಕೊಂಡು ಬಿಟ್ಟಿದೆ." (ಇನ್ನೊಬ್ಬರ ಕಷ್ಟಸುಖಗಳ ಬಗ್ಗೆ ನಾವು ಚಿಂತಿಸಬಾರದು ಎಂಬುದು ಈ ವಚನದ ಭಾವವಲ್ಲ. ಇನ್ನೊಬ್ಬರ ಲೋಪದೋಷಗಳ ಬಗ್ಗೆ ನಾವು ಆಡಿಕೊಳ್ಳಬಾರದು, ನಿಂದಿಸಬಾರದು ಎಂಬುದು ಈ ವಚನದ ಭಾವವಾಗಿದೆ)

520. ಹುಸಿಮುನಿಸು

ಕಣ್ಣ ಕೋಪಕ್ಕೆ ಮುಂದರಿಯದೆ ನುಡಿದು,
ಮನಮಚ್ಚಿ ಮರುಳಾದೆ ನೋಡವ್ವಾ!
ಕೇಳು ಕೇಳವ್ವಾ ಕೆಳದಿ,
ಸಖಿಯರಿಲ್ಲದೆ ಸುಖವ ಬಯಸಿದಡೆ
ದೊರಕೊಂಬುದೇ ಹೇಳಾ?

ಎನ್ನ ಮುನಿಸು ಎನ್ನಲ್ಲಿಯೆ ಅಡಗಿತ್ತು;
ಇನ್ನು ಬಾರಯ್ಯಾ ಲಿಂಗದೇವಾ. - ಬ.ವ.ದೀ. 518

ಸಾಧಕರು ಪರಮಾತ್ಮನ ಬಗ್ಗೆ ಅಪಾರವಾಗಿ ಚಿಂತಿಸುವಾಗ ಬಗೆಬಗೆಯ ಭಾವವನ್ನು ಪ್ರದರ್ಶಿಸುವರು. ಪ್ರೇಮ, ಕೋಪ, ಮುನಿಸು, ವಿರಹ ಇತ್ಯಾದಿಗಳು ಚಲ್ಲವರಿಯುತ್ತವೆ. ದೇವನು ಅನುಗ್ರಹಿಸದೆ ಚೆಲ್ಲಾಟವಾಡುವುದನ್ನು ಕಂಡು ಕೋಪ ಗೊಂಡು, "ಹೋಗು ನಿನ್ನನ್ನು ಪೂಜಿಸುವುದಿಲ್ಲ. ನಿನಗೆ ನನ್ನ ಬಗ್ಗೆ ಪ್ರೀತಿ ಇಲ್ಲದ ಮೇಲೆ ನಾನಾದರೂ ಏಕೆ ದುಂಬಾಲು ಬೀಳಲಿ?" ಎಂದು ಕೋಪಗೊಳ್ಳುವರು. ಮರುಕ್ಷಣಕ್ಕೆ ಪಶ್ಚಾತ್ತಾಪವಾಗುವುದು. "ಛೇ, ಮುಂದಿನ ಪರಿಣಾಮ ಏನಾದೀತೆಂದರಿಯದೆ ಏನೇನೋ ನುಡಿದು ಬಿಟ್ಟೆ. ನನ್ನ ಮನಸ್ಸು ದೇವನಿಗೆ ಒಲಿದು ಹುಚ್ಚಾಗಿ ಹೋಗಿದೆ. ಕೇಳು ನನ್ನ ಸ್ನೇಹಿತೆಯಾದ ವಿವೇಕವೆ! ಸಖಿನಿಲ್ಲದೆ ಸುಖವನ್ನು ಯಾರಾದರೂ ಬಯಸಲು ಸಾಧ್ಯವೆ? ಬಯಸಿದರೂ ಅದು ದೊರಕೊಳ್ಳುವುದೆ?" ಹೀಗೆ ಪರಿತಪಿಸುತ್ತ ಸಾಧಕ ಜೀವಿ ಬಸವರಸರ ಹೃದಯ ಲಿಂಗದೇವನಲ್ಲಿ ಬೇಡುತ್ತದೆ. "ನನ್ನಿಂದ ತಪ್ಪಾಯ್ತು. ನಾನು ಕೋಪವನ್ನು ಮಾಡಿಕೊಳ್ಳಬಾರದಿತ್ತು. ನನ್ನ ಮುನಿಸು ನನ್ನಲ್ಲಿಯೇ ಅಡಗಿ ಹೋಗಿದೆ. ನನ್ನ ಮುಂಗೋಪಕ್ಕಾಗಿ ಕ್ಷಮಿಸು. ಈಗಲಾದರೂ ಬಂದು, ಅನುಗ್ರಹಿಸು."

521. ಹುಟ್ಟುಗೆಟ್ಟೆನು

ಲಜ್ಜೆಗೆಟ್ಟೆನು, ನಾಣು ಗೆಟ್ಟೆನು.
ಕುಲಗೆಟ್ಟೆನು, ಛಲಗೆಟ್ಟೆನು;
ಸಂಗಾ, ನಿಮ್ಮ ಪೂಜಿಸಿ ಭವಗೆಟ್ಟೆನು ನಾನಯ್ಯಾ!
ಲಿಂಗದೇವಯ್ಯಾ, ನಿಮ್ಮ ಮುಟ್ಟಿ ಹುಟ್ಟುಗೆಟ್ಟೆನು ನಾನು!
- ಬ.ವ.ದೀ. 519

(ಸಾಮಾನ್ಯವಾಗಿ ಲೋಕದ ಜನರು ಬಟ್ಟೆಬರೆ ತೊಡುವುದರಲ್ಲಿ, ಆಭರಣಗಳನ್ನು ಅಲಂಕರಿಸಿಕೊಳ್ಳುವುದರಲ್ಲಿ ಆಸಕ್ತರು. ಇದು ಅವರಿಗೆ ಸಹಜ ನಡೆ. ಯಾರಾದರೂ ಸಾಧಕರು ಹಾಗಿರದೆ ಸರಳವಾಗಿ ಬಟ್ಟೆಯುಟ್ಟು, ವಿಭೂತಿ-ರುದ್ರಾಕ್ಷಿ ಧರಿಸಿ ಇರತೊಡಗಿದರೆ ಅವರ ಬಗ್ಗೆ ಪಿಸಿಪಿಸಿ ಮಾತನಾಡಿಕೊಳ್ಳುವರು. ಹೀಗಾಗಿಯೇ ನಾವು ಸಣ್ಣವರಿದ್ದಾಗ ತಪ್ಪದೆ ಪೂಜೆ ಮಾಡಿ ವಿಭೂತಿ ಧರಿಸಿಕೊಂಡರೂ ಹೊರಗೆ ಹೋಗುವಾಗ ವಿಭೂತಿಯನ್ನು ಅಳಿಸಿಕೊಳ್ಳುತ್ತಿದ್ದೆವು. ನಂತರ ವೈರಾಗ್ಯವು ಗಟ್ಟಿಗೊಂಡಾಗ ಕಾಲೇಜಿಗೆ ಹೋಗುವಾಗಲೂ (1965) ವಿಭೂತಿ ಧರಿಸಿ ಕೊಂಡು, ಕೊರಳಲ್ಲಿ ರುದ್ರಾಕ್ಷಿ ಹಾಕಿಕೊಂಡು, (ಮೊದಲು ಉಡುತ್ತಿದ್ದ ಬಣ್ಣ ಬಣ್ಣಗಳ ಸೀರೆ ಬಿಟ್ಟು) ಬಿಳಿಯ ಸೀರೆ ಉಟ್ಟು ಹೋಗತೊಡಗಿದೆ. ಆಗ ಎಲ್ಲರೂ ವಿಚಿತ್ರವಾಗಿ ನೋಡುತ್ತ ಪಿಸಿಪಿಸಿ ಮಾತನಾಡಿ ಕೊಳ್ಳುತ್ತಿದ್ದರು. ಮೊದಲಿನಂತೆ ನಾಚಿಕೆ, ಮುಜುಗರ ಆಗುತ್ತಿರಲಿಲ್ಲ. ಇಂಥದೊಂದು ಮನಸ್ಥಿತಿಯು ಸಾಧಕರಿಗೆ ಪ್ರಾಪ್ತವಾಗುತ್ತದೆ.)

ನಿಮ್ಮ ಮೇಲಿನ ಭಕ್ತಿಯಿಂದ ನಾನು ಸಂಕೋಚ, ಮುಜುಗರ, ನಾಚಿಕೆಗಳನ್ನು ತೊರೆದಿದ್ದೇನೆ. ಕುಲಾಭಿಮಾನವನ್ನು ಬಿಟ್ಟೆನು. ಛಲ ಹಿಡಿದು ಕ್ಷುಲ್ಲಕ ವಿಷಯಗಳಿಗಾಗಿ ಹೋರಾಡುವುದನ್ನು ಬಿಟ್ಟಿದ್ದೇನೆ. ದೇವಾ, ನಿಮ್ಮನ್ನು ಪೂಜಿಸಿದ್ದರಿಂದ ಜನ್ಮ ಜನ್ಮಾಂತರದ ಪರಿಭ್ರಮಣವಾದ ಭವವನ್ನು ಗೆದ್ದೆನು. ಲಿಂಗದೇವಯ್ಯಾ, ನಿಮ್ಮನ್ನು ಧರಿಸಿ, ಸ್ಪರ್ಶಿಸುವ, ಪೂಜಿಸುವ ಭಾಗ್ಯದಿಂದಾಗಿ ನನ್ನ ಹುಟ್ಟನ್ನು ಅರ್ಥಾತ್ ಜನ್ಮವನ್ನು ಸಾರ್ಥಕ ಪಡಿಸಿಕೊಂಡೆನು.

522. ಭಕ್ತ ಬಾಳೆಯ ಕಂಬ

ಮಾಡುವ ಭಕ್ತನ ಕಾಯ ಬಾಳೆಯ ಕಂಬದಂತಿರಬೇಕು;
ಮೆಲ್ಲಮೆಲ್ಲನೆ ಹೊರೆಯೆತ್ತಿ ನೋಡಿದಡೆ ಒಳಗೆ ಕೆಚ್ಚಿಲ್ಲದಿರಬೇಕು.
ಮೇಲಾದ ಫಲವ ನಮ್ಮವರು ಬೀಜಸಹಿತ ನುಂಗಿದರು;
ಎನಗಿನ್ನಾವ ಭಯವಿಲ್ಲ ಕಾಣಾ, ಲಿಂಗದೇವಾ. - ಬ.ವ.ದೀ. 520

ಇದು ಬಹು ಅಮೂಲ್ಯವಾದ ಸಂದೇಶ ಇರುವ ವಚನ. ಭಕ್ತನ ಮನಃಸ್ಥಿತಿ ಹೇಗಿರಬೇಕೆಂಬ ಸಂದೇಶವಿಲ್ಲಿದೆ. ಭಕ್ತನ ಪರಿಕಲ್ಪನೆಯೇ ಅದ್ಭುತ. ಅವನು ಲಿಂಗ ದೇವನಿಗೆ ಶರಣಾದ ಸಾಧಕ ಜೀವಿ. ಅಷ್ಟೇ ಅಲ್ಲ ಲಿಂಗದ ಮುಖವಾದ ಸಮಾಜ (ಜಂಗಮ) ಸೇವೆಗೆ ತನ್ನನ್ನು ತಾನು ಸಮರ್ಪಿಸಿಕೊಂಡವನು. ಅವನ ತನು ಮನ ಧನ ಮೂರೂ ಸೇವಾಕಾರ್ಯದಲ್ಲಿ ನಿರತವಾಗಿರುತ್ತವೆ.

ಭಕ್ತನ ಕಾಯ ಮತ್ತು ಮನಸ್ಸುಗಳು ಬಾಳೆಯ ಕಂಬದಂತೆ ಇರಬೇಕು. ಬಾಳೆಯ ದಿಂಡಿನಲ್ಲಿ ಗಡಸು ಭಾಗ ಇರುವುದಿಲ್ಲ. ಸುಲಿಯುತ್ತ ಹೋದಂತೆ ಸುರುಳಿ ಸುರುಳಿಯಾಗಿ ಬಿಚ್ಚುತ್ತ ಹೋಗುತ್ತದೆ. ಒಳಗೆ ಅಲ್ಲಿ ಗಟ್ಟಿಯಾದ ಭಾಗವಿರದು. ಹಾಗೆಯೇ ಸೇವಾವ್ರತಧಾರಿ ಭಕ್ತನ ಶರೀರದಲ್ಲಿ ಆಲಸ್ಯ, ಜಡತೆಯ ಗಡಸುತನ, ಮನದಲ್ಲಿ ನಾನು ಮಾಡುತ್ತಿದ್ದೇನೆ ಎಂಬ ಅಹಂಭಾವ ಇರದು. ಆಗ ಮಾತ್ರ ದಾಸೋಹ (ಸೇವೆ) ಎಂಬ ಫಲವನ್ನು ಶರಣರು (ಸಮಾಜ) ಸ್ವೀಕರಿಸುವರು. ಹೀಗಾಗಿ ಶರಣನ ನಿಸ್ವಾರ್ಥ ಸೇವೆಯು ಭವಭಯದ ಬಿಡುಗಡೆಗೆ ಕಾರಣ ವಾಗುವುದು. ಪ್ರತಿ ಫಲಾಪೇಕ್ಷೆಯಿಲ್ಲದೆ ತನ್ನ ಆತ್ಮತೃಪ್ತಿಗಾಗಿ ಭಕ್ತನು ಸೇವಾಕಾರ್ಯವನ್ನು ಮಾಡಬೇಕು.

523. ಭಕ್ತ - ಜಂಗಮ ಸಂಬಂಧ

ಜಂಗಮವ ಕೂಡಿಕೊಂಡು
ಲಿಂಗಾರ್ಚನೆಯ ಮಾಡುವುದು ಲೇಸಯ್ಯಾ ಭಕ್ತಂಗೆ,
ಆ ಭಕ್ತನ ಕೂಡಿಕೊಂಡು
ಲಿಂಗಾರ್ಚನೆಯ ಮಾಡುವುದು ಲೇಸಯ್ಯಾ ಜಂಗಮಕ್ಕೆ,
ಆ ಜಂಗಮದ ಕರ್ತವ್ಯವೆ ಆ ಭಕ್ತಂಗೆ ದಾಸೋಹ!
ಆ ಭಕ್ತನ ಕಿಂಕಲವೆ ಆ ಜಂಗಮಕ್ಕೆ ದಾಸೋಹ!
ಆ ಭಕ್ತನೊಳಗೆ ಜಂಗಮವಡಗಿ
ಆ ಜಂಗಮದೊಳಗೆ ಭಕ್ತನಡಗಿ-
ಇದನೇನೆಂದು ಹವಣಿಸುವೆನಯ್ಯಾ, ಎರಡೊಂದಾದ ಘನವ?
ಇದನೇನೆಂದುಪಮಿಸುವೆನಯ್ಯಾ, ತೆರಹಿಲ್ಲದ ಘನವ?
ಈ ಎರಡಕ್ಕೆ ಭವವಿಲ್ಲೆಂದು ಲಿಂಗದೇವಾ,
ನಿಮ್ಮ ಶ್ರುತಿಗಳು ಹೇಳಿದುವಾಗಿ,
ನಿಮ್ಮ ಕರುಣವೆನಗಾಯಿತ್ತು. - ಬ.ವ.ದೀ. 521

ಜಂಗಮ - ಭಕ್ತ ಸಂಬಂಧ ವಿವರಿಸುವ ಬಹು ಅಮೂಲ್ಯ ವಚನವಿದು. ಮಠ ಪೀಠಾಧಿ ಶರಿಗೆ ಬಹು ದೊಡ್ಡ ಸಂದೇಶವನ್ನು ನೀಡುತ್ತದೆ. ಭಕ್ತನು ಜಂಗಮವನ್ನು ಆಗಾಗ ಆಹ್ವಾನಿಸಿ

ಅವರಿಂದ ಇಷ್ಟಲಿಂಗಾರ್ಚನೆ ಮಾಡಿಸಿ, ತಾನು ಜೊತೆಗೆ ಕುಳಿತು ತನ್ನ ಪರಿವಾರವನ್ನು ಕೂರಿಸಿಕೊಂಡು ಲಿಂಗಾರ್ಚನೆ ಮಾಡಬೇಕು. ಎಷ್ಟೇ ದೊಡ್ಡ ಶ್ರೀಮಂತನಾಗಲಿ, ಅಧಿ ಕಾರಿಯಾಗಲಿ ಈ ಆಚರಣೆಯನ್ನು ಕೈಬಿಡಬಾರದು. ಅದೇ ರೀತಿ ಜಂಗಮನು ಭಕ್ತನು ತನ್ನನ್ನು ಆಹ್ವಾನಿಸಲಿ ಬಿಡಲಿ ಅವನ ಮನೆಗೆ ಹೋಗಿ ಇಷ್ಟಲಿಂಗಾರ್ಚನೆ ಕೈಗೊಳ್ಳಬೇಕು. ಶ್ರೀಮಂತರ ಮನೆಗೆ ಹೋಗುವುದು, ಬಡಭಕ್ತರು ಕರೆದರೂ ಹೋಗದೆ ಇರುವುದು ಜಂಗಮಕ್ಕೆ ಶೋಭಿಸುವಂಥದಲ್ಲ. ಅದೇ ರೀತಿ ಮೇಲ್ಜಾತಿ ಲಿಂಗಾಯತರ ಮನೆಗೆ ಹೋಗುವುದು ಕೆಳಜಾತಿ ಲಿಂಗಾಯತರ ಮನೆಗೆ ಹೋಗಲು ನಿರಾಕರಿಸುವುದು ಮುಂತಾಗಿ ಮಾಡಬಾರದು.

ದಾಸೋಹ ಅರ್ಥಾತ್ ಸೇವೆಯನ್ನು ಮಾಡಬೇಕಾದುದು ಜಂಗಮದ ಕರ್ತವ್ಯವು ಅಹುದು, ಭಕ್ತರ ಕರ್ತವ್ಯವೂ ಅಹುದು. ಜಂಗಮವು ತನ್ನ ಕರ್ತವ್ಯ ಮಾಡಿದರೆ ಅದೇ ಅವನು ಮಾಡುವ ದಾಸೋಹ. ಭಕ್ತನು ತೋರಿಸುವ ವಿನಯವೇ ಅವನ ದಾಸೋಹ. ಭಕ್ತನು ಅನನ್ಯ ಗೌರವವನ್ನು ಜಂಗಮಕ್ಕೆ ತೋರಿಸಿದರೆ ಜಂಗಮ ಅಪಾರ ವಾತ್ಸಲ್ಯವನ್ನು ಭಕ್ತನಿಗೆ ತೋರಿಸಬೇಕು. ಇದೇ ಎರಡೊಂದಾದ ಘನ. ಇಂಥ ಭಕ್ತ ಜಂಗಮ ಉಭಯತರಿಗೂ ಪುನರ್ಜನ್ಮವಿಲ್ಲ, ಭವವಿಲ್ಲ ಎಂದು ದೇವರ ವಾಣಿಯು ಹೇಳುತ್ತದೆ. ಹೀಗಾಗಿ ಲಿಂಗದೇವಾ, ನಿಮ್ಮ ಅನುಗ್ರಹದಿಂದ ಭಕ್ತ -ಜಂಗಮದ ಈ ಪವಿತ್ರ ಸಂಬಂಧವನ್ನು ನಾನು ತಿಳಿಯಲು ಸಾಧ್ಯವಾಯಿತು. ಈ ಸನ್ನಿವೇಶದಲ್ಲಿ ಪ್ರಾಸಂಗಿಕವಾಗಿ ಒಂದು ವಿಷಯವನ್ನು ಪ್ರಸ್ತಾಪಿಸಿದರೆ ತಪ್ಪಾಗಲಿಕ್ಕಿಲ್ಲ. ಈಗೊಂದು ವಾರದಿಂದ ದಿನಪತ್ರಿಕೆಗಳಲ್ಲಿ ಒಂದು ವಿಷಯ ಪ್ರಸ್ತಾಪವಾಗುತ್ತಿದೆ. ಪೂಜ್ಯ ಪೇಜಾವರ ಶ್ರೀಗಳು ದಲಿತರ ಕೇರಿಯಲ್ಲಿ ಪಾದಯಾತ್ರೆ ಮಾಡುತ್ತಿರುವುದೇ ಅಲ್ಲದೆ ದಲಿತರಿಗೆ ವೈಷ್ಣವ ದೀಕ್ಷೆ ಕೊಡಲು ಸಿದ್ಧವಿರುವುದಾಗಿ ಹೇಳಿದ್ದಾರೆ. ಆದರೆ ದೀಕ್ಷಿತರೊಡನೆ ಅಥವಾ ಇತರ ದಲಿತರೊಡನೆ ಸಹಪಂಕ್ತಿ ಭೋಜನ ಮಾಡುವುದಿಲ್ಲವಾಗಿಯೂ ದಲಿತರಿಗೆ ಉಡುಪಿಯಲ್ಲಿ ಕೃಷ್ಣನ ದರ್ಶನಕ್ಕೆ ಅವಕಾಶ ಮಾಡಿಕೊಡುವು ದಾಗಿಯೂ ಆದರೆ ಪೂಜೆಯ ಹಕ್ಕನ್ನು ಕೊಡುವುದಿಲ್ಲವಾಗಿಯೂ ಹೇಳಿದ್ದಾರೆ. ವೈದಿಕ ಧರ್ಮದ ಸಂವಿಧಾನಕ್ಕೆ ಅನುಸಾರವಾಗಿ ಅವರು ಹೇಳಿದ್ದಾರೆ. ಇದಕ್ಕೆ ವಿರುದ್ಧ ವಾಗಿದೆ ವಚನ ಸಾಹಿತ್ಯ ಸಂವಿಧಾನ. ಇದರ ಪ್ರಕಾರ ದೀಕ್ಷೆಯು ಎಲ್ಲರಿಗೂ ಲಭ್ಯ. ದೀಕ್ಷೆ ನೀಡಿದ ಗುರು - ಜಂಗಮರು ದೀಕ್ಷಿತರ ಮನೆಗೆ ಹೋಗಬೇಕು. ಅವರೊಡನೆ ಇಷ್ಟಲಿಂಗಾರ್ಚನೆ ಮಾಡಬೇಕು. ಪ್ರಸಾದ ಸ್ವೀಕಾರ ಮಾಡಬೇಕು. ಇನ್ನಿತರ ಗೃಹಸ್ಥರು ತಮ್ಮ ಮನೆಗೆ ಆಹ್ವಾನಿಸಬೇಕು. ಅವರ ಮನೆಗೆ ಹೋಗಬೇಕು. ಅವರೊಡನೆ ಇಷ್ಟಲಿಂಗಾರ್ಚನೆ ಮಾಡಬೇಕು. ಪ್ರಸಾದ ಸ್ವೀಕಾರ ಮಾಡಬೇಕು. ವಿವಾಹ ಸಂಬಂಧ ಬೆಳೆಸಬೇಕು, ಮಾತ್ರವಲ್ಲ ವಚನ ಸಾಹಿತ್ಯ ಸಂವಿಧಾನದ ಪ್ರಕಾರ ಜಾತಿ ಕುಲ ವೃತ್ತಿ ಭೇದವಿಲ್ಲದೆ ಯಾರು ಬೇಕಾದರೂ ಪೂಜೆ - ಪೌರೋಹಿತ್ಯದ ಹಕ್ಕನ್ನು ಆಚಾರ - ಅರಿವು - ಅನುಭಾವದಿಂದ ಭಕ್ತ - ಗುರು - ಜಂಗಮರಾಗುವ ಸೌಲಭ್ಯವನ್ನು ಹೊಂದಬಹುದು. ಈ ಮೂಲಕ ವೈದಿಕ (ಹಿಂದು) ಧರ್ಮಕ್ಕೂ ಬಸವ (ಲಿಂಗಾಯತ) ಧರ್ಮಕ್ಕೂ ಇರುವ ವ್ಯತ್ಯಾಸವನ್ನು ಗುರುತಿಸಬಹುದು.

524. ಭಕ್ತಿ - ಹರಿವ ನದಿ

'ಹರಿವ ನದಿಯ ತೆರನ ಹೋಲಬಲ್ಲಡೆ ಭಕ್ತಿ;
ಕೂಡಿ ಸಯದಾನವ ನೀಡಬಲ್ಲಡೆ ಭಕ್ತಿ;
ನೀಡಿ ಮಿಕ್ಕುದ ಕಾಯ್ದುಕೊಂಡಿರಬಲ್ಲಡೆ
ಕೂಡಿಕೊಂಡಿಪ್ಪ ನಮ್ಮ ಲಿಂಗದೇವ! - ಬ.ವ.ದೀ. 521

ಭಕ್ತಿಯು ಹರಿವ ನದಿಯಂತೆ ಇರಬೇಕೇ ವಿನಾ ಮಡುಗಟ್ಟಿ ಮಲೆತ ನೀರಿನಂತಲ್ಲ! ಅದ್ಭುತವಾದ ಉಪಮೆ!! ಮೂಢ ಭಕ್ತಿ, ಶುಷ್ಕಾಚರಣೆಗಳಿಂದ ಕೂಡಿದ ಕರ್ಮಠ ಭಕ್ತಿಯು ಮಡುಗಟ್ಟಿ ಮಲೆತ ನೀರಿನಂತಿದ್ದರೆ ಜ್ಞಾನ ಸಹಿತವಾದ ಭಕ್ತಿಯು ಹರಿವ ನದಿಯಂತೆ ಇರುತ್ತದೆ. ನದಿಯು ಹರಿಯುತ್ತ ಹೋದಂತೆ ತಿಳಿಯಾಗುವುದು, ಸೂರ್ಯಕಿರಣಗಳಿಗೆ ಮೈಯೊಡ್ಡಿ ಶುದ್ಧವಾಗುವುದು. ಹರಿವ ನದಿ ಜೀವಂತಿಕೆಯ ಸಂಕೇತ, ಚೈತನ್ಯದ ಚಿಲುಮೆ. ಭಕ್ತಿಯು ಸಹ ವೈಚಾರಿಕತೆ, ಸುಜ್ಞಾನದಿಂದ ಚೈತನ್ಯ ಶಾಲಿಯಾಗಿ ಇರಬೇಕು.

ಕೂಡಿ ಸಯದಾನವ ನೀಡಬಲ್ಲದೆ ಭಕ್ತಿ; ಹಂಚಿಕೊಂಡು ತಿನ್ನುವುದು. ಭಕ್ತಿ ಕಲಿಸುವ ಸದ್ಗುಣ. ಭಕ್ತಿವಂತನು ದೇವನಿಗೆ ಶರಣಾಗುವ ಕಾರಣ ಒಂದು ಬದ್ಧತೆಗೆ ಒಳಗಾಗುತ್ತಾನೆ. ಆ ಬದ್ಧತೆ ಏನೆಂದರೆ ದೇವನ ಭಕ್ತರೆಲ್ಲರೂ ಈ ಪವಿತ್ರ ಕುಟುಂಬದ ಸದಸ್ಯರು. ಎಲ್ಲರೊಡನೆ ಸಯದಾನವ (ಪಡಿಪದಾರ್ಥಗಳು) ಹಂಚಿಕೊಂಡು ತಿನ್ನುವಂತಿರಬೇಕು. ತನ್ನ ಗಳಿಕೆಯ ಒಂದು ಪಾಲನ್ನು ತೆಗೆದು, ಮೀಸಲಿಟ್ಟು ಉಳಿದುದನ್ನು ತಾನು ಬಳಸಬೇಕು. ಆಂದರೆ ಮಾತ್ರ ದೇವನ ಒಲುಮೆಯಾಗುವುದು.

525. ಭಕ್ತಿ ಎಂಬ ಬೇತಾಳ ?!

ಏನು ಮಾಡುವೆ? ಎನ್ನ ಪುಣ್ಯದ ಫಲವು!
ಶಾಂತಿಯ ಮಾಡಹೋದಡೆ ಬೇತಾಳನಾಯಿತ್ತು
ಲಿಂಗದೇವರ ಪೂಜಿಸಿಹನೆಂದಡೆ
ಭಕ್ತಿಯೆಂಬ ಮೃಗ ಎನ್ನನಟ್ಟಿ ಬಂದು ನುಂಗಿತ್ತಯ್ಯಾ. - ಬ.ವ.ದೀ. 522

ಈ ವಚನದಲ್ಲಿ ಬೇತಾಳ ಎಂಬ ಪದವು ವಿಲಕ್ಷಣವಾಗಿ ಪ್ರಯೋಗವಾಗಿದೆ. ಇದು ಋಣಾತ್ಮಕವಾಗಿ ಪ್ರಯೋಗವಾಗದೆ ಧನಾತ್ಮಕವಾಗಿ ಪ್ರಯೋಗವಾಗಿದೆ. ಏಕೆಂದರೆ ಈ ಬೇತಾಳವು ಪಾಪದ ಫಲವಾದುದಲ್ಲ ಪುಣ್ಯದ ಫಲವಾದುದು. ಶಾಂತಿಯ ಮಾಡಬೇಕೆಂದು ಹೋದಾಗ ಇದು ಬೃಹತ್ತಾಗಿ ಬೆಳೆದು, ನುಂಗಿ ಬಿಡುತ್ತದೆ. ಲಿಂಗದೇವನನ್ನು ಪೂಜಿಸುತ್ತ ಆನಂದವನ್ನು ಹೊಂದಬೇಕು ಎಂದು ಪ್ರಯತ್ನಿಸು ವಾಗಲೇ ಭಕ್ತಿ ಎಂಬ ಮೃಗ (ಬೇತಾಳನಂತೆ ಬೃಹದಾಕಾರದಲ್ಲಿ ಬೆಳೆದು) ಸಾಧಕ ಜೀವಿ ಬಸವಣ್ಣನ ಮನಸ್ಸನ್ನು ಬೆನ್ನು ಹತ್ತಿ ನುಂಗುತ್ತಿದೆ. ಹೀಗಾಗಿ ಪೂಜ್ಯ - ಪೂಜಕ - ಪೂಜೆ ಎಂಬ ತ್ರಿಪುಟಿ ಅಳಿಯುತ್ತಲಿದೆ. ಪೂಜೆ ಮಾಡುವವ, ಪೂಜೆ ಮಾಡುವ ಕ್ರಿಯೆ, ಪೂಜಿಸಲ್ಪಡುವ ದೇವ - ಎಂಬ ಭಿನ್ನಭಾವ ಅಳಿಯುತ್ತಲಿದೆ.

526. ನಿಷ್ಪತ್ತಿ ಎಂಬ ಹಣ್ಣು

ಭಕ್ತಿಯೆಂಬ ಪೃಥ್ವಿಯ ಮೇಲೆ
ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ ಎಲೆಯಾಯಿತ್ತು
ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು,
ಆಚಾರವೆಂಬ ಕಾಯಾಯಿತ್ತು,
ನಿಷ್ಪತ್ತಿಯೆಂಬ ಹಣ್ಣಾಯಿತ್ತು
ನಿಷ್ಪತ್ತಿಯೆಂಬ ಹಣ್ಣು ತಾನು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ

ಲಿಂಗದೇವ ತನಗೆ ಬೇಕೆಂದು ಎತ್ತಿಕೊಂಡ. - ಬ.ವ.ದೀ. 524

ಇದು ಅಮೂಲ್ಯವಾದ, ಗುರು ಬಸವಣ್ಣನವರ ಲಿಂಗೈಕ್ಯ ಸ್ಥಿತಿಯನ್ನು ಮತ್ತು ಲಿಂಗೈಕ್ಯ ವಿಧಾನವನ್ನು ಚಿತ್ರಿಸುವ ವಚನ ಮತ್ತು ಅನೇಕ ಅಪವಾದ, ಆರೋಪಗಳಿಗೆ ಉತ್ತರ ನೀಡುವ ವಚನ.

ಗುರು ಬಸವಣ್ಣನವರು ಸಂಗಮೇಶ್ವರ ಲಿಂಗದೊಳಕ್ಕೆ ಹೋದರು ಎಂದು ಅವೈಜ್ಞಾನಿಕವಾಗಿ ಮೂಢಭಕ್ತರು ಹೇಳುವರು. ಕೂಡಲ ಸಂಗಮದ ಗುಡಿಯವರು ಒಂದು ಫೋಟೋ ಮಾರುತ್ತಾರೆ. ಅದರಲ್ಲಿ, ಸಂಗಮೇಶ್ವರ ಸ್ಥಾವರ ಲಿಂಗದಿಂದ ಶಿವನು ಎದ್ದಿದ್ದಾನೆ. ಕಿರೀಟಧಾರಿಯಾದ ಬಸವಣ್ಣನವರನ್ನು ಅಪ್ಪಿಕೊಳ್ಳುತ್ತಾನೆ. ಇದು ಗುರು ಬಸವಣ್ಣನವರ ವಿಚಾರ ಧಾರೆಗೆ ವಿರುದ್ಧವಾದುದಾಗಿದೆ. ಶಿಲಾಲಿಂಗದೊಳಗಿನಿಂದ ಯಾರೂ ಉದ್ಭವಿಸಲಾರರು, ಯಾರೂ ಅಡಗಲೂ ಆರರು. ಬಾಲ್ಯದಲ್ಲಿ ಸಾಕ್ಷಾತ್ಕಾರಕ್ಕೆ ಮುನ್ನ ಬಸವರಸರು ಸಂಗಮೇಶ್ವರನ ಅರ್ಚಕರಾಗಿದ್ದರು. ಆದರೆ ನಂತರ ಅವರು ನಿರಾಕಾರನಾದ ಲಿಂಗ ದೇವನ ಪೂಜಕರಾದರು. ಆದ್ದರಿಂದ ಅವರು ಜೀವನದ ಕಡೆಯ ಕ್ಷಣದಲ್ಲಿ ಪುನಃ ಸ್ಥಾವರಲಿಂಗವನ್ನು ಅರಸಿಕೊಂಡು ಹೋದರು ಎಂದು ಹೇಳುವುದು ಹಾಸ್ಯಾಸ್ಪದವಾಗುವುದು.

ಇನ್ನೊಂದು ವಾದವೆಂದರೆ ಗುರು ಬಸವಣ್ಣನವರು ಶತ್ರು ಸೈನ್ಯದಿಂದ ವಧಿಸಲ್ಪಟ್ಟರು ಎನ್ನುವುದು. ಗುರು ಬಸವಣ್ಣನವರು ರಾಜಸಿಂಹಾಸನಾಕಾಂಕ್ಷಿಗಳಾಗಿ ಬಿಜ್ಜಳ ರಾಜನ ವಧೆ ಮಾಡಿಸಿದರು. ಇದನ್ನು ತಿಳಿದು ರಾಜ ಸೈನ್ಯ ಬೆನ್ನುಹತ್ತಿತು. ಆಗ ಅವರು ನದಿಯೊಳಕ್ಕೆ ಹಾರಿದರು ಎಂದು ಕೆಲವರು, ವಧಿಸಲ್ಪಟ್ಟರು ಎಂದು ಮತ್ತೆ ಕೆಲವರು ಹೇಳುವುದುಂಟು. ಕಾಲಜ್ಞಾನ ವಚನಗಳ ಪ್ರಕಾರ ಸೈನ್ಯವು ಬೆನ್ನುಹತ್ತಿದ್ದು ವಚನ ಸಾಹಿತ್ಯ ತೆಗೆದುಕೊಂಡು ಹೊರಟ ಶರಣರ ತಂಡವನ್ನೇ ವಿನಾ (ಗಡಿಪಾರು) ಏಕಾಂಗಿಯಾಗಿ ಹೊರಟ ಗುರು ಬಸವಣ್ಣನವರನ್ನಲ್ಲ. ಉಳವಿಗೆ ಹೋಗುವ ಮಾರ್ಗದಲ್ಲಿ ಎರಡು ಸ್ಥಳಗಳಲ್ಲಿ - ಕಾದರವಳ್ಳಿ, ಮುರುಗೋಡು ಎಂಬಲ್ಲಿ ಯುದ್ಧವಾಗಿದೆ. ಒಂದು ವೇಳೆ ಯಾವುದಾದರೂ ಸ್ಥಳದಲ್ಲಿ ಗುರು ಬಸವಣ್ಣನವರು ನದಿ ಹಾರಿದ್ದರೆ, ಅಥವಾ ವಧೆಯಾಗಿದ್ದರೆ ಗುರು ಬಸವಣ್ಣನವರ ಅನುಯಾಯಿಗಳು ಆ ಜಾಗದಲ್ಲಿ ಏನಾದರೂ ಸ್ಮಾರಕ ಕಟ್ಟದೆ ಬಿಡುತ್ತಿರಲಿಲ್ಲ. ಅವರು ಅಂತಿಮವಾಗಿ ಬರೆದ ವಚನಗಳಲ್ಲಿ ಶತ್ರುಗಳ ಅಥವಾ ವಧೆಯ ಭಯವನ್ನೇನೂ ಕಾಣುವುದಿಲ್ಲ.

ಹಾಗಾದರೆ ಲಿಂಗೈಕ್ಯ ಎಂದರೇನು? ಹೇಗೆ ಲಿಂಗೈಕ್ಯರಾದರು? ಎಂಬುದಕ್ಕೆ ವಿವರಣೆ ನೀಡುತ್ತದೆ ಭಕ್ತಿ ಎಂಬ ಪೃಥ್ವಿಯ ಮೇಲೆ ಎಂಬ ವಚನ. ಯೋಗ ಮಾರ್ಗ ದಿಂದ ಲಿಂಗೈಕ್ಯರಾಗಲು ಬಯಸಿ ತ್ರಾಟಕದಲ್ಲಿ ನಿರತರಾದ ಬಸವಣ್ಣನವರು ಅನೇಕ ವಚನಗಳನ್ನು ಬರೆದಿದ್ದು ಇದು ಕಡೆಯ ವಚನ ಎನಿಸುತ್ತದೆ. ಭಕ್ತಿ ಎಂಬ ಪೃಥ್ವಿಯ ಮೇಲೆ - ಒಂದು ಅರ್ಧ ಶರೀರ ಇನ್ನೊಂದು ಅರ್ಧ ಭಕ್ತಿ. ಗಿಡವು ಬೆಳೆಯುವುದು ಭೂಮಿಯ ಮೇಲೆಯೇ. ಅಧ್ಯಾತ್ಮ ಸಾಧನೆಯ ಬೆಳೆ ಬೆಳೆಯುವ ಶರೀರವನ್ನು ಕ್ಷೇತ್ರವೆಂದು, ಆತ್ಮವನ್ನು ಕ್ಷೇತ್ರಜ್ಞ ಎಂದು ಕರೆಯಲಾಗುವುದು. ಅಧ್ಯಾತ್ಮಿಕ ಬೆಳೆ ಬೆಳೆಯಲು ಬೇಕಾದ ಪೋಷಕಾಂಶಗಳೆಂದರೆ ಭಕ್ತಿ, ಆಚಾರ, ಜ್ಞಾನ. ಭೌತಿಕ ಬೆಳೆ ಬೆಳೆಯಲು ಬೇಕಾದ ಅಂಶಗಳೆಂದರೆ ನೀರು, ಗೊಬ್ಬರ, ರವಿ ತೇಜ. ಗೊಬ್ಬರ, ರವಿ ತೇಜ ಕಡಿಮೆಯಾದರೂ ಗಿಡ ಕೊಂಚಕಾಲ ತಡೆಯಬಲ್ಲುದು; ನೀರು ಇಲ್ಲವಾದರೆ ಗಿಡವು ಬದುಕಲಾರದು. ಹಾಗೆ

ಆಚಾರ, ಜ್ಞಾನ ಕೊಂಚ ಕಡಿಮೆಯಾದರೂ ಅಧ್ಯಾತ್ಮದ ಬೆಳೆ ಉಳಿಯಬಹುದು, ಭಕ್ತಿಯ ನೀರು ಕಡಿಮೆಯಾದರೆ ಉಳಿಯಲಾರದು. ಭೂಮಿಇಲ್ಲದೆ ಬೆಳೆಹೇಗೆಸಾಧ್ಯವಿಲ್ಲವೋ ಭಕ್ತಿಯ ಆಶ್ರಯವಿಲ್ಲದೆ ಅಧ್ಯಾತ್ಮಿಕ ಬೆಳೆ ಸಾಧ್ಯವಿಲ್ಲ.

ಗುರು ಎಂಬ ಬೀಜವಂಕುರಿಸಿ - ಗುರು ಕಾರುಣ್ಯ ಧಾರೈಸದಿದ್ದರೆ ಅಧ್ಯಾತ್ಮದ ಅಂಕುರ ಮೊಳೆಯುವುದಿಲ್ಲ. ಗುರುವು ದೇವನ ಪ್ರತಿನಿಧಿಯಾಗಿ ಅನುಗ್ರಹ ನೀಡುವನು. ಕೇವಲ ವಿಶೇಷ ಸಂದರ್ಭದಲ್ಲಿ, ಯುಗಪುರುಷರ ಜೀವನದಲ್ಲಿ ಸೃಷ್ಟಿಕರ್ತನು ನೇರವಾಗಿ ಅವರನ್ನು ಅನುಗ್ರಹಿಸಿ ತನ್ನ ಕಾರ್ಯಕ್ಕೆ ಆಯ್ಕೆ ಮಾಡಿಕೊಳ್ಳುವನು. ಲಿಂಗವೆಂಬ ಎಲೆಯಾಯಿತ್ತು- ದೇವರ ಜ್ಞಾನ ಎಂಬ ಎಲೆಗಳು ತಳೆಯುವವು. ರಶ್ಮಿಯ ಮೂಲಕ ರವಿಯನ್ನು ಕಾಣುವಂತೆ, ದೇವನ ಕೃಪೆಯ ಮೂಲಕವೇ ದೇವನ ಜ್ಞಾನ ಉಂಟಾಗುವುದು. ವಿಚಾರವೆಂಬ ಹೂವಾಯಿತ್ತು - ಚಿಂತನ ಶಕ್ತಿ, ಸಮ್ಯಕ್ ದೃಷ್ಟಿ (Divine Eye) ಎಂಬ ಹೂವು ಅರಳುವುದು. ಆಚಾರವೆಂಬ ಕಾಯಾಯಿತ್ತು, ಸಮ್ಯಕ್ ಕ್ರಿಯೆಯೇ ಸದಾಚಾರ; ಸದ್ಭಕ್ತಿ, ಸುಜ್ಞಾನ ಎಲ್ಲವೂ ಸಮಿಶ್ರಗೊಂಡು ಸದಾಚಾರ ಎಂಬ ಫಲವು ರೂಪುಗೊಳ್ಳುವುದು. ಇದು ಪಕ್ವವಾಗುತ್ತ ನಿಷ್ಪತ್ತಿ - ದಿವ್ಯಾನುಭವ (Divine Experience) ಎಂಬ ಹಣ್ಣಾಗುವುದು. ಈ ಅನುಭೂತಿಯ ಬಳಿಕ ಜೀವನ್ಮುಕ್ತತೆ ಎಂಬ ನಿರ್ಲಿಪ್ತ ಸ್ಥಿತಿ ಪ್ರಾಪ್ತವಾಗುವುದು. ಆಗ ಈ ಜೀವವು ಶರೀರವೆಂಬ ವೃಕ್ಷದಿಂದ ತೊಟ್ಟು ಬಿಟ್ಟು ಕಳಚಿದ ಹಣ್ಣಿನಂತೆ. ದೇಹದ ಪಂಜರದಿಂದ ಬಿಡಿಸಿಕೊಂಡು ಗೂಡಿನ ಹಕ್ಕಿಯಂತೆ ಜೀವವಿರುವುದು. ಇದನ್ನು ಸುಲಭವಾಗಿ ಬಿಡಿಸಿ ಜೀವನ್ಮುಕ್ತನು ಲಿಂಗದೇವನಿಗೆ ಸಮರ್ಪಿಸುವನು. ತಾವೀಗ ನಿಷ್ಪತ್ತಿಯಾದ ಹಣ್ಣು ಎಂದು ಗುರು ಬಸವಣ್ಣನವರು ಹೇಳುವರು. ತಮ್ಮನ್ನು ಲಿಂಗದೇವನು ತನಗೆ ಬೇಕೆಂದು ಎತ್ತಿಕೊಳ್ಳುತ್ತಿದ್ದಾನೆಂದು ಈ ವಚನದಲ್ಲಿ ಸ್ಪಷ್ಟಪಡಿಸಿದ್ದಾರೆ.

ಮಾಹೇಶ್ವರ ಸ್ಥಲ

1. ಮಾಹೇಶ್ವರ ಜ್ಞಾನಿ ಸ್ಥಲ

527. ಒಬ್ಬನೆ ದೇವ

ಸ್ವಾಮಿ ನೀನು, ಶಾಶ್ವತ ನೀನು
ಎತ್ತಿದೆ ಬಿರಿದ ಜಗವೆಲ್ಲರಿಯಲು
ಮಹಾದೇವ, ಮಹಾದೇವ, ಮಹಾದೇವ
ಇಲ್ಲಿಂದ ಮುಂದೆ ಶಬ್ದವಿಲ್ಲ
ಪಶುಪತಿ ಜಗಕ್ಕೇ ಏಕೋದೇವ
ಸ್ವರ್ಗ ಮರ್ತ್ಯ ಪಾತಾಳದೊಳಗೆ
ಒಬ್ಬನೇ ದೇವ ಲಿಂಗದೇವ.

- ಬ.ವ.ದೀ. 525

ದೇವನ ಅಸ್ತಿತ್ವವನ್ನು ನಂಬಿ ಅವನ ಸ್ವರೂಪವನ್ನು ಚಿತ್ರಿಸುವ ಅತ್ಯಮೂಲ್ಯ ವಚನವಿದು. ದೇವಾ, ನೀನು ಒಡೆಯ, ಶಾಶ್ವತ ಸ್ವರೂಪನು - ಈ ಜಗತ್ತಿಗೆಲ್ಲ ಮಾಲಿಕನು ನೀನು ಮಾತ್ರವಲ್ಲ ಹಿಂದೆ, ಇಂದು, ಮುಂದೆ- ಎಂದೆಂದೂ ಇರುವ ಶಾಶ್ವತನು ನೀನು. ಈ ಜಗತ್ತು ಸೃಷ್ಟಿಯಾಗುವ ಪೂರ್ವದಲ್ಲಿಯೂ ನೀನಿದ್ದೆ, ಸೃಷ್ಟಿಯಾದ ಬಳಿಕ ಈಗಲೂ ನೀನು ಇದ್ದೀಯ. ಈ ಜಗತ್ತು ಲಯವಾದ ಬಳಿಕವೂ ನೀನಿರುವೆ. ಹೀಗಾಗಿ ನೀನು ಶಾಶ್ವತ. ಎತ್ತಿದೆ ಬಿರುದ ಜಗವೆಲ್ಲರಿಯಲು - ಇದು ಒಂದು ಅದ್ಭುತ ನಿರೂಪಣೆ. ದೇವರು ಸ್ವಯಂಸಿದ್ಧವಾದ, ನಿತ್ಯ, ಸತ್ಯ ಅಸ್ತಿತ್ವವುಳ್ಳ

ಚೈತನ್ಯ. ಆದರೆ ಅವನು ತನ್ನ ಪಾಡಿಗೆ ತಾನು ಇದ್ದ. ಏಕೆಂದರೆ ಅವನು ಇದ್ದಾನೆ ಎಂದು ಹೇಳಲು ಯಾರೂ ಇರಲಿಲ್ಲ. ಮೊದಲು ಅಚರವಾದ ಪಂಚಭೂತಾತ್ಮಕ ಜಗತ್ತು ಹುಟ್ಟಿತು. ನಂತರ ಜೀವಾತ್ಮರು ಹುಟ್ಟಿದರು. ಜೀವಾತ್ಮರುಗಳಲ್ಲಿಯೇ ಶ್ರೇಷ್ಠ ಜೀವಿಯಾದ ಮಾನವನ ಸೃಷ್ಟಿಯಾಯಿತು. ಅದೊಂದು ದಿನ ಮಾನವನು ತಾನಾರು? ತನ್ನ ಸ್ವರೂಪವೇನು? ತನ್ನ ಮೂಲವಾವುದು ಎಂದು ಗಂಭೀರವಾಗಿ ಚಿಂತನೆ ಮಾಡಿದ. ತಾನು ಬ್ರಹ್ಮಾಂಡಗತ ಚೈತನ್ಯವಾದ ಪರಮಾತ್ಮನ ಒಂದು ಅಂಶ. ಈ ಜೀವಾತ್ಮದ ಕರ್ತನನ್ನು ಜೀವಾತ್ಮವು ಗುರುತಿಸಿ, 'ದೇವಾ, ನೀನೇ ಈ ಜಗತ್ತಿನ ತಂದೆ '(ಕರ್ತ) ಎಂದಾಗ ದೇವನಿಗೆ ಕರ್ತನೆಂಬ ಬಿರುದು ಒದಗುತ್ತದೆ. ಹೀಗೆ ದೇವನಿಗೆ ಕರ್ತನೆಂಬ ಬಿರುದು ಕೊಟ್ಟವನು ಜೀವಾತ್ಮನೆ! ಒಬ್ಬ ಕನ್ಯೆ ವಿವಾಹವಾಗಿ ತಾಯಿಯಾಗುತ್ತಾಳೆ. ಅವಳಿಗೆ ತಾಯ್ತನ ಬಂದುದು ಮಗುವಿನಿಂದಲೆ. ಹೀಗೆ ತಾಯಿಯು ಮಗುವಿಗೆ ಜನ್ಮ ಕೊಟ್ಟರೆ, ಮಗುವು ತಾನು ಹುಟ್ಟಿದ ನಂತರ ತಾಯಿಗೆ ತಾಯ್ತನದ ಬಿರುದು ಕೊಡುತ್ತದೆ. ಅದೇ ರೀತಿ ದೇವನು ಈ ಜಗತ್ತನ್ನು ಸೃಷ್ಟಿಸಿದರೆ ಜಗತ್ತು ಅಂದರೆ ಜಗತ್ತಿನ ಜೀವಾತ್ಮರು ದೇವನಿಗೆ ಕರ್ತನೆಂಬ ಬಿರುದನ್ನು ಕೊಡುತ್ತಾರೆ.

"ಮಹಾದೇವ ಮಹಾದೇವ ಇಲ್ಲಿಂದ ಮುಂದೆ ಶಬ್ದವಿಲ್ಲ" - ಮಹಾದೇವ ಎಂದರೆ ಎಲ್ಲಕ್ಕೂ ಮಿಗಿಲಾದ ಆತ್ಯಂತಿಕ ಶಕ್ತಿಯಾದ ಪರಮಾತ್ಮ-Great God ಇದನ್ನು ದಾಟಿದ ಮತ್ತೊಂದು ಶಕ್ತಿ ಇಲ್ಲ. ಪಶುಪತಿ ಜಗಕ್ಕೆ ಏಕೋ ದೇವ! ಇಲ್ಲಿ ಪಶುಪತಿ ಎಂದರೆ ಶಿವ ಎಂದಲ್ಲ. ಪಶುವನ್ನು ಜೀವಾತ್ಮನಿಗೂ, ಪಾಶವನ್ನು ಭವ ಬಂಧನವೆಂದು ಹಗ್ಗಕ್ಕೂ, ಪಶುಪತಿಯನ್ನು ಜೀವಾತ್ಮರ ಒಡೆಯನಾದ ಪರಮಾತ್ಮನಿಗೂ ಹೋಲಿಸಲಾಗುವುದು. ಇಂಥ ದೇವನು ಒಬ್ಬನೆ. ಸ್ವರ್ಗ ಅಂದರೆ ಮೇಲಿನ ಲೋಕ, ಮರ್ತ್ಯ-ನಾವು ವಾಸಿಸುವ ಲೋಕ, ಪಾತಾಳ ಎಂದರೆ ಕೆಳಗಿನ ಲೋಕ. ಇನ್ನೂ ಲೋಕಗಳಿದ್ದರೆ - ಅವೆಲ್ಲವನ್ನೂ ವ್ಯಾಪಿಸಿಕೊಂಡು ಇರುವ ದೇವನು ಒಬ್ಬನೇ ಒಬ್ಬ, ಪುರಾಣಗಳು ಹೇಳುವಂತೆ, ಮೂಢಾತ್ಮರು ತಿಳಿದಂತೆ ಸ್ವರ್ಗದ ದೇವತೆ ಇಂದ್ರ, ವೈಕುಂಠದ ದೇವತೆ ವಿಷ್ಣು, ಕೈಲಾಸದ ದೇವತೆ ಶಿವ, ನರಕದ ದೇವತೆ ಯಮ - ಎಂಬುದೆಲ್ಲ ಭ್ರಾಂತಿ. ಎಲ್ಲೆಡೆಯಲ್ಲಿ ತುಂಬಿಕೊಂಡಿರುವವನು ಒಬ್ಬನೇ - ಲಿಂಗದೇವ.

528. ಒಬ್ಬನೇ ದೇವನೆಂದುದು ವೇದ

ಶ್ರುತಿಗಗಮ್ಯ ದ್ವಾದಶಾದಿತ್ಯನಪ್ರತಿಮ ಮಹಿಮಂಗೆ ಪ್ರತಿಯುಂಟೆ?
ಸೋಮಃ ಪವತೇ ಎಂಬ ಶ್ರುತಿಯನರಿತು
ಶಿವನೇಕೋದೇವ ರುದ್ರನದ್ವಿತೀಯ ನೆಂದು
ನಂಬುವುದು ಕಾಣಿರಣ್ಣಾ
ಕೂಡಲ ಸಂಗಮದೇವನಲ್ಲದಿಲ್ಲೆಂದುದು ವೇದ. - ಬ.ವ.ದೀ. 526

ಶ್ರುತಿಗಳು ಪರಮಾತ್ಮನನ್ನು ಹೊಗಳುತ್ತವಾದರೂ ಅವುಗಳಿಗೆ ದೇವನು ನಿಲುಕದವನಾಗಿದ್ದಾನೆ. ಹನ್ನೆರಡುಸೂರ್ಯರ ಪ್ರಭೆಗೂ ಮಿಗಿಲಾದ ಪ್ರಕಾಶ ಸ್ವರೂಪನಾಗಿದ್ದಾನೆ. ದೇವನು ಅಪ್ರತಿಮ; ಅವನಿಗೆ ಹೋಲಿಸಲು ಮತ್ತೊಂದು ಶಕ್ತಿ ಇಲ್ಲ. ಇಂತಹ ಮಹಿಮನಿಗೆ ಇನ್ನೊಂದು ಸ್ಪರ್ಧಾತ್ಮಕ ಶಕ್ತಿಯುಂಟೆ? ಶಿವನೇ ಏಕೋದೇವ, ರುದ್ರನ ಹೊರತು ಇನ್ನೊಬ್ಬರಿಲ್ಲ ಎಂದು ನಂಬಬೇಕು. ಕೂಡಲ ಸಂಗಮ ದೇವ ಅರ್ಥಾತ್ ಶಿವನಲ್ಲದೆ ಇಲ್ಲ, ಅವನೊಬ್ಬನೇ

ದೇವ ಎಂದುದು ವೇದ.

ಶಿವ -ರುದ್ರ -ಲಿಂಗದೇವ.

ಬಸವರಸರಲ್ಲಿ ಜ್ಞಾನೋದಯ (ಸಾಕ್ಷಾತ್ಕಾರ)ಕ್ಕೆ ಪೂರ್ವದಲ್ಲಿ ಸ್ವಲ್ಪ ಗೊಂದಲವಿದೆ. ಈಗಾಗಲೇ ನಾನು ಅನೇಕ ಬಾರಿ ತಿಳಿಸಿರುವಂತೆ ಅವರು ಸಂಗಮೇಶ್ವರನ ಅರ್ಚಕರಾಗಿ, ಆರಾಧಕರಾಗಿ ಏಕದೇವತಾ ಉಪಾಸಕರಾಗಿದ್ದರು. ಹರಿಬ್ರಹ್ಮರಿಗಿಂತಲೂ ಮಿಗಿಲಾಗಿ ಶಿವನನ್ನು ಇಷ್ಟಪಡುತ್ತಿದ್ದರು. ಶಿವನನ್ನೇ ದೇವರು, ಸೃಷ್ಟಿಕರ್ತ ಎಂದು ನಂಬಿರುವುದನ್ನು ಬಸವರಸರು, ಮಹಾದೇವಿಯಕ್ಕ ಮುಂತಾದ ವರಲ್ಲಿ ಕಾಣುತ್ತೇವೆ. ಒಂದಾನೊಂದು ದಿನ ಜ್ಞಾನೋದಯ ವಾದಾಗ ತ್ರಿಮೂರ್ತಿಗಳಲ್ಲಿ ಒಬ್ಬನಾದ, ಜಟಾಧಾರಿಯಾದ, ಪಾರ್ವತಿಪತಿ ಶಿವನೂ ಐತಿಹಾಸಿಕ ವ್ಯಕ್ತಿ ಇವರೆಲ್ಲರನ್ನೂ ಮೀರಿದವನು ಸೃಷ್ಟಿಕರ್ತನಾದ ಲಿಂಗದೇವ ಎಂಬ ಅರಿವನ್ನು ಹೊಂದಿದರು. ಆದ್ದರಿಂದ ಶಿವನೇ ದೇವರೆನ್ನುವ ವಚನಗಳನ್ನು ಮತ್ತು ನಿರಾಕಾರ ದೇವನ ಪರಿಕಲ್ಪನೆಯ ವಚನಗಳನ್ನು ಸ್ಪಷ್ಟವಾಗಿ ವರ್ಗೀಕರಣ ಮಾಡುವುದು ಅಗತ್ಯವಿದೆ.

ಶಿವ ಮೊಟ್ಟ ಮೊದಲ ಯೋಗಿ, ಯುಗಪುರುಷ. ನಂದಿ, ರುದ್ರ, ..ೀರಭದ್ರ ಮುಂತಾದವರು ಶಿವನ ಅನುಯಾಯಿಗಳು. "ಓಂ ನಮಃ ಶಿವಾಯ" ಆದಿ ಗುರು ಶಿವನನ್ನು ಕುರಿತು ವಾಮದೇವ ಋಷಿ ಸಂಯೋಜಿಸಿದ ಮಂತ್ರ. ಆದ್ದರಿಂದ ನಾವು ಶಿವ, ರುದ್ರ, ವೀರಭದ್ರ ಮುಂತಾದ ವ್ಯಕ್ತಿಗಳ ಬಗ್ಗೆ ಸರಿಯಾದ ಜ್ಞಾನ ಹೊಂದುವುದು ಅಗತ್ಯವಿದೆ.

ಹೊರಗಿನಿಂದ ಆಗಮಿಸಿದ ಆರ್ಯರು, ನೆಲೆನಿಂತು ವೇದಗಳನ್ನು ರಚಿಸುವ ವೇಳೆಗಾಗಲೇ ಶಿವ ಆಗಿಹೋಗಿದ್ದು ಪ್ರಭಾವಶಾಲಿ ದೇವತೆಯಾಗಿ ದೈವೀಕರಣ ಗೊಂಡಿದ್ದನು. ಆರ್ಯರುಗುಡಿಗುಂಡಾರಗಳನಿರ್ಮಾತೃಗಳಾಗದೆಕೇವಲಅಗ್ನಿಯ(ಹೋಮ-ಹವನ, ಯಾಗ-ಯಜ್ಞಗಳ) ಮೂಲಕ ಹವಿಸ್ಸುಅರ್ಪಿಸುತ್ತಿದ್ದರು. ಶೈವ ಸಂಸ್ಕೃತಿಯು ಶಿವದೇವಾಲಯಗಳನ್ನು ನಿರ್ಮಿಸಿಶಿವಮತ್ತುಮಾತೃದೇವತೆ(ಪಾರ್ವತಿ)ಯಪೂಜೆಯನ್ನುಅನುಸರಿಸುತ್ತಿತ್ತು. ಹೀಗಾಗಿ ನಾಡಿನಾದ್ಯಂತ ಶಿವನ ಹೊರತು ಅನ್ಯ ದೇವತೆಗಳ ಪ್ರಭಾವವು ವೇದಗಳ ಕಾಲದಲ್ಲಿ ಇರಲಿಲ್ಲ. ಹೀಗಾಗಿ "ಶಿವನೇಕೋದೇವ ರುದ್ರನದ್ವಿತೀಯ" ಎಂಬ ಸ್ತುತಿ ವೇದಗಳಲ್ಲಿ ಬಂದಿರು ವುದು ಸ್ವಾಭಾವಿಕ.

529. ವೇದಗಳ ಶಿವಸ್ತುತಿ

ಉಪ್ಪರಗುಡಿ ನಂದಿ ವಾಹನ ಸದ್ಯೋಜಾತನ ಬಾಗಿಲ ಮುಂದೆ
ಸಾರುತ್ತೈದಾವೆ, ನೋಡಾ, ಶ್ರುತಿಗಳು ನಾಲ್ಕು ವೇದವೂ ಹುಸಿಯದೆ
ಭರ್ಗೋ ದೇವಸ್ಯ ಧೀಮಹಿ ಎಂದುದಾಗಿ
ಕೂಡಲಸಂಗಮದೇವನಲ್ಲದಿಲ್ಲೆಂದುದು ವೇದ. - ಬ.ವ.ದೀ. 527

ಉಪ್ಪರಗುಡಿ ಎಂದರೆ ಎತ್ತರವಾಗಿ ಕಟ್ಟಲ್ಪಟ್ಟ ಕಾವಿ (ನಂದಿ) ಧ್ವಜ. ಎತ್ತರವಾದ ಗೋಪುರ ಉಳ್ಳ ದೇವಾಲಯಗಳೆಂದು ಅರ್ಥಮಾಡಿದರೂ ತಪ್ಪಾಗದು, ದೇವಾಲಯದ ಹೊರಗೆ ನಂದಿಯ ಮೂರ್ತಿ ಎಲ್ಲೆಡೆಯಲ್ಲಿ ಕಾಣಸಿಗುವುದು. ಇವು ಸಾರುತ್ತೈದಾವೆ ಶಿವನ ಮಹಿಮೆಯನ್ನು. ನಾಲ್ಕು ವೇದಗಳು, ಶ್ರುತಿಗಳು ಸುಳ್ಳು ಹೇಳದೆ ಭರ್ಗನೇ ದೇವನೆಂದು ಘೋಷಿಸುತ್ತಲಿವೆ. ಗಾಯತ್ರಿ ಮಂತ್ರದಲ್ಲಿ ಈ ವಾಕ್ಯವಿದೆ. ಅಲ್ಲಿ ನಿರಾಕಾರ ದೇವರಿಗೆ ಅನ್ವಯಿಸುವುದೆಂದು ಹೇಳಲಾಗುತ್ತದೆ.

530. ವೇದವು ಸ್ವಯಂಭುವಲ್ಲ.

ವೇದ ಸ್ವಯಂಭುವೆಂಬ ವಾದಿ ಕೇಳೆಲವೊ
ಏಕೋದೇವಃ ರುದ್ರನದ್ವಿತೀಯಃ
ಎಂದು ನಂಬುವುದು ಕಾಣೆರಣ್ಣಾ.
ಓಂ ದ್ಯಾವಾಭೂಮೀ ಜನಯನ್ ದೇವ
ಏಕ ಏವ ರುದ್ರೋನ ದ್ವಿತೀಯಃ
ಎಂಬು ನಂಬುವುದು ಕಾಣೆರಣ್ಣಾ
ಚಕಿತಮಭಿಧತ್ತೇ ಎಂದು ಶ್ರುತಿ ಸಾರುತ್ತೈದಾವೆ
ಜಗದ ಕರ್ತ ಲಿಂಗದೇವನೊಬ್ಬನೆ ಕಾಣೆರಣ್ಣಾ. - ಬ.ವ.ದೀ. 528

ವೈದಿಕ (ಹಿಂದೂ) ಧರ್ಮವು ವೇದಗಳು ಸ್ವಯಂಭುವು; ಅಂದರೆ ತಮಗೆ ತಾವೇ ಹುಟ್ಟಿದವು. ಹೀಗಾಗಿ ಅವು ಅಪರಿವರ್ತನೀಯ, ಸ್ವಯಂ ಪರಿಪೂರ್ಣ ಎನ್ನುತ್ತದೆ. ಆದರೆ ಗುರು ಬಸವಣ್ಣನವರು ಇದನ್ನು ಒಪ್ಪುವುದಿಲ್ಲ. ದೇವರು ಮೊದಲು ಆ ದೇವನೆಂದರೆ ರುದ್ರ, ಅವನಿಗೆ ಸಮಾನವಾಗಿ ಯಾರಿಲ್ಲ. ಅವನೇ ಸ್ವರ್ಗ ಭೂಮಿ ಮುಂತಾದ ಎಲ್ಲ ಲೋಕಗಳ ಕರ್ತೃ ಮತ್ತು ಒಡೆಯ. ದೇವರ ಸ್ವರೂಪ ಅತ್ಯಂತ ಆಶ್ಚರ್ಯಕರ, ಎಂದು ಶಾಸ್ತ್ರಗಳು ಸಾರಿ ಸಾರಿ ಹೇಳುತ್ತಿವೆ. ಆದ್ದರಿಂದ ಜಗತ್ತಿನ ಕರ್ತನಾದ ಲಿಂಗದೇವನೊಬ್ಬನೇ ದೇವರು.

ಇನ್ನೊಂದು ವಚನದಲ್ಲಿ ಶರಣ. ಅಂಬಿಗರ ಚೌಡಯ್ಯನವರು ಹೇಳುತ್ತಾರೆ. "ನಾದದ ಬಲದಿಂದ ವೇದಂಗಳಾದುವಲ್ಲದೆ ವೇದ ಸ್ವಯಂಭುವಲ್ಲ ನಿಲ್ಲು." ಜೈನ, ಬೌದ್ಧ, ಲಿಂಗಾಯತ, ಸಿಖ್ ಧರ್ಮಗಳು ಚಾರ್ವಾಕದಂತಹ ಪಂಥ ಇವೆಲ್ಲವೂ ವೇದಗಳು ಸ್ವಯಂಭು ಎಂದು ಒಪ್ಪುವುದಿಲ್ಲ ಮತ್ತು ಇವು ದೇವರ ವಾಣಿ ಎಂದೂ ಒಪ್ಪುವುದಿಲ್ಲ. ಪರಮಾತ್ಮನು ಜ್ಞಾನಿಗಳು, ದ್ರಷ್ಟಾರರ ಮೂಲಕ ದಿವ್ಯ ಸಂದೇಶವನ್ನು ನೀಡುವನು ಎನ್ನುತ್ತವೆ. ಮಾನವರು ಅರ್ಥಾತ್ ದಿವ್ಯಜ್ಞಾನಿಗಳಾದ ಮಾನವರ ಮೂಲಕ ಬರುವುದರಿಂದ ಮಾನವ ಸಹಜವಾದ ದೋಷಗಳು ನುಸುಳಬಹುದು. ಅಂಥವನ್ನು ಕಾಲಾನುಸಾರ ತಿದ್ದಲೂಬಹುದು.

ವೇದಗಳು ಸ್ವಯಂಭು, ಸ್ವಯಂಸಿದ್ಧ, ಅಪೌರುಷೇಯ, ದೇವರ ವಾಣಿ ಎಂದು ಸನಾತನಿಗಳುಹೇಳುವರು. ಅದನ್ನೇ ನೀನು ನಂಬುವುದಾದರೆಸ್ವತಃವೇದವೇ ಹೇಳಿದೆ, "ರುದ್ರನೇ ದೇವ, ಇನ್ನೊಬ್ಬ ದೇವರಿಲ್ಲ." ಎಂದು. ಇನ್ನಾದರೂ ನಂಬಲು ಕಲಿಯಿರಿ. "ಸ್ವರ್ಗಭೂಮಿ ಎಲ್ಲವೂ ದೇವನಿಂದ ಉದಿಸಿವೆ; ರುದ್ರನೊಬ್ಬನೇ ದೇವ, ಅವನ ಹೊರತು ಅನ್ಯ ದೈವವಿಲ್ಲ" ಎಂದು ನಂಬಿರಿ. ದೇವನು ಎಲ್ಲಕ್ಕೂ ಅತೀತವಾದ ಅಚ್ಚರಿ ಎಂದು ಶಾಸ್ತ್ರಗಳು ಹೇಳುತ್ತಲಿವೆ. ಜಗತ್ತಿನ ಕರ್ತೃವಾದ ದೇವನು ಒಬ್ಬನೇ ಸರಿ.

ಆರ್ಯರು ಹೊರಗಿನಿಂದ ಆಗಮಿಸಿ ಭಾರತ ಭೂಮಿಯಲ್ಲಿ ವೇದಗಳನ್ನು ರಚಿಸುವ ಕಾಲಕ್ಕೆ ಆಗಲೇ ಆಗಿಹೋಗಿದ್ದ ಶಿವನು ಬಹು ಪ್ರಭಾವಶಾಲಿ ದೇವತೆಯಾಗಿದ್ದ. ಅವನ ಅನುಯಾಯಿಗಳಾದ ರುದ್ರಗಣಗಳು (ಶಿವ ಸೈನಿಕರು) ಬಲು ಶೂರರು, ಹೋರಾಟಗಾರರೂ ಆಗಿದ್ದರು. ಹೀಗಾಗಿ ಶಿವನಲ್ಲದೆ ಅನ್ಯ ದೈವವಿಲ್ಲ ಎಂಬ ಮಾತು ಪುನಃ ಪುನಃ ಹೇಳಲ್ಪಟ್ಟಿದೆ. ಋಗ್ವೇದವು ಪುರಾತನವಾದುದು; ಅದು ರಚನೆಯಾಗುವ ಕಾಲದಲ್ಲಿ ಇನ್ನೂ ಹರಿ, ಬ್ರಹ್ಮ ಇಂದ್ರ

****

ಮುಂತಾದವರ ಪರಿಕಲ್ಪನೆ ಮೂಡಿರಲಿಲ್ಲ. ನಿಸರ್ಗದ ದೇವತೆಗಳಾದ ವರುಣ, ಅಗ್ನಿ, ಮಿತ್ರ, ಪೂಷನ್, ಉಷಾ, ಸಂಧ್ಯಾ ಮುಂತಾದವುಗಳ ಬಣ್ಣನೆ ಮಾತ್ರ ಅಲ್ಲಿ ಕಾಣಿಸಿಕೊಳ್ಳುತ್ತದೆ.

ಗುರು ಬಸವಣ್ಣನವರು, ಅಕ್ಕಮಹಾದೇವಿ ಮುಂತಾದ ಅನೇಕರಲ್ಲಿ ಆರಂಭದ ದಿನಗಳಲ್ಲಿ ದೇವತಾ ಶಿವ, ಐತಿಹಾಸಿಕ ಶಿವ ಮತ್ತು ಸೃಷ್ಟಿಕರ್ತ ಲಿಂಗದೇವ (ಪರಶಿವ)- ಈ ಮೂರು ಪರಿಕಲ್ಪನೆಯ ಮಧ್ಯೆ ತುಸು ಗೊಂದಲ ಕಾಣಬರುತ್ತದೆ. ಏಕದೇವತಾ (monodeitism) ಉಪಾಸಕರಾಗಿದ್ದಾಗ ಶಿವನೊಬ್ಬನೇ ದೇವ ಎನ್ನುತ್ತಾರೆ. ಕಾಲಾನಂತರದಲ್ಲಿ ಸೃಷ್ಟಿಕರ್ತನೊಬ್ಬನೇ ದೇವ ಎಂಬ ಏಕದೇವೋಪಾಸನೆಗೆ (monotheism) ಒತ್ತುಕೊಡುತ್ತಾರೆ.

531. ಅಣೋರಣಿಯಾನ್

ಶ್ರುತಿತತಿಯ ಶಿರದ ಮೇಲೆ
ಅತ್ಯತಿಷ್ಠದ್ದಶಾಂಗುಲನ ನಾನೇನೆಂಬೆನಯ್ಯಾ?
ಘನಕ್ಕೆ ಘನಮಹಿಮನ ಮನಕ್ಕಗೋಚರನ!
ಅಣೋರಣೀಯಾನ್ ಮಹತೋಮಹೀಯಾನ್
ಮಹಾದಾನಿ ಲಿಂಗದೇವ. - ಬ.ವ.ದೀ. 529


ಶ್ರುತಿ -ಸ್ಮೃತಿ ಮುಂತಾದ ಶಾಸ್ತ್ರ ಸಮೂಹದ ಶಿರದ ಮೇಲೆ ಹತ್ತು ಅಂಗುಲ ಇರುವ ಅಂದರೆ ಅತೀತನಾಗಿರುವ ಸೃಷ್ಟಿಕರ್ತನ ಬಗ್ಗೆ ನಾನು ಏನು ಹೇಳಲಿ? ಅತ್ಯಂತ ಘನವಾದ ಮಹಿಮೆಯುಳ್ಳವನು; ನೆನೆಯುವ ಮನಕ್ಕೆ ಅಗೋಚರನು. ಇಂಥ ದೇವನು ಅಣುವಿನಲ್ಲಿ ಅಣುವಾಗಿ, ಮಹತ್ತಿನಲ್ಲಿ ಮಹವಾಗಿ ಸರ್ವವ್ಯಾಪಿಯು, ಸರ್ವಾಂತರ್ಯಾಮಿಯಾಗಿಯೂ ಇದ್ದಾನೆ. ಲಿಂಗದೇವನು ಮಹಾದಾನಿ; ಈ ಜಗತ್ತನ್ನು ದಾನವಾಗಿ ಕೊಟ್ಟಿದ್ದಾನೆ. ಅಂತೆಯೇ ಉಚಿತವಾಗಿ ನೀರು, ಗಾಳಿ, ಬೆಂಕಿ, ಸೂರ್ಯ, ಚಂದ್ರ ಇತ್ಯಾದಿ ಪ್ರಾಪ್ತಿಯಾಗುತ್ತವೆ.


532. ವಿಶ್ವ ಚೈತನ್ಯ

ಸಕಳ ನಿಷ್ಕಳವ ಕೂಡಿಕೊಂಡಿಪ್ಪೆಯಾಗಿ
ಸಕಳ ನೀನೆ ನಿಷ್ಕಳ ನೀನೆ ಕಂಡಯ್ಯಾ.
'ವಿಶ್ವತಃಚಕ್ಷು' ನೀನೆ ದೇವಾ,
'ವಿಶ್ವತೋಮುಖ' ನೀನೆ ದೇವಾ,
'ವಿಶ್ವತೋ ಬಾಹು' ನೀನೆ ದೇವಾ,
'ವಿಶ್ವತೋ ಪಾದ' ನೀನೆ ದೇವಾ, ಲಿಂಗದೇವಾ. - ಬ.ವ.ದೀ. 530

ಪರಮಾತ್ಮನಲ್ಲಿ ದ್ವಿಮುಖವ್ಯಕ್ತಿತ್ವವಿದೆ. ನಿರ್ಗುಣ- ಸಗುಣ, ನಿರಾಕಾರ- ಸಾಕಾರ, ನಿಷ್ಕಳ -ಸಕಳ. ಎಲ್ಲ ಗುಣಗಳಿಗೆ ಅತೀತನಾಗಿ ದೇವರು ನಿರ್ಗುಣ. ಆದರೆ ದಯೆ -ಕರುಣೆ- ಪ್ರೀತಿ ಮುಂತಾದ ಗುಣಗಳಿಂದ ಸಗುಣನೂ ಅಹುದು. ಭಕ್ತರು ಬಯಸಿದ ರೂಪದಲ್ಲಿ ದರ್ಶನ ನೀಡುವ ಸಾಕಾರನೂ ಅಹುದು; ಯಾವುದೇ ಆಕಾರವಿರದ ನಿರಾಕಾರನೂ ಅಹುದು. ವಿಶ್ವದ ತುಂಬೆಲ್ಲ ದೇವನ ಕಣ್ಣುಗಳಿವೆ. ಅಂದರೆ ದೇವನು ಸರ್ವದ್ರಷ್ಟಾರ. ವಿಶ್ವದ ತುಂಬೆಲ್ಲ ವ್ಯಾಪಿಸಿ ಕೊಂಡಿರುವ ಸರ್ವವ್ಯಾಪಿ; ವಿಶ್ವದ ತುಂಬೆಲ್ಲ ಲಿಂಗದೇವನ ಕೈಗಳಿವೆ ಅಂದರೆ ಸರ್ವಶಕ್ತನು.

(ಮುಂದುವರಿಯುವುದು..)









ಸಮಾಜ ಸೇವಾರತ್ನ ಮೈಸೂರಿನ ಕೆ.ಎಂ.ಶಿವಶಂಕರ್ ಮನೆಯ ಮೇಲೆ ೩೫ಅಡಿಎತ್ತರದ ಬಸವ ಭಾವಚಿತ್ರ

alyana Kirana kannada Monthly October 2010 RNI No.19988/70,
PMG/KA/BGW-50 Without Pre Payment (W)-17, Pages 32, Rs.10.00,
osted at Bangalore GPO on 3,10,20 of Every Month



ಥಾಲಯದ ಖಾತೆ ಮತ್ತು ಬೀದರ ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ರೇವೂನಾಯಕ ಬೆಳಮಗಿ ಅವರಿಂದ ಕಲ್ಯಾಣಪರ್ವದ ಉದ್ಘಾಟನೆ



ಗುಲಬರ್ಗಾ ವಿ.ವಿ.ಯ ಕುಲಪತಿ ಶ್ರೀ ಪುಟ್ಟಯ್ಯ ಅವರಿಂದ ಧರ್ಮಚಿಂತನ ಗೋಷ್ಠಿಯ ಉದ್ಘಾಟನೆ. ಜಿಲ್ಲಾ ಪಂಚಾಯತ್ ಉಪಾಧ್ಯಕ್ಷೆ ಶ್ರೀಮತಿ ಮೀನಾಕ್ಷಿ ಸಂಗ್ರಾಮ

kalyanakiranabdp@gmail.com